ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಬುಧವಾರ, ಮೇ 12, 2021

ಸಂಪುಟ : 47 ಸಂಚಿಕೆ : 359 ☎ 254736 91642 99999 RNI No: 27369/75, KA/SK/CTA-275/2021-2023. O/P @ J.D. Circle P.O. ಪುಟ : 4 ರೂ : 4.00 www.janathavani.com janathavani@mac.com

## ಆಕ್ಸಿಬಸ್ ಸೇವೆಗೆ ಸಿಎಂ ಚಾಲನೆ



ಬೆಂಗಳೂರು, ಮೇ 11 – ಕೊರೊನಾ ರೋಗಿಗಳಿಗೆ ತುರ್ತು ಸಂದರ್ಭದಲ್ಲಿ ನೆರವಾಗಲು ಆಕ್ಸಿಬಸ್ ಸೇವೆಗೆ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಚಾಲನೆ ನೀಡಿದ್ದಾರೆ.

ಆಕ್ಸಿಬಸ್‌ನಲ್ಲಿ ಎಂಟು ರೋಗಿಗಳಿಗೆ ಆಕ್ಸಿಜನ್ ನೆರವು ನೀಡಬಹುದು. ಇಂತಹ 20 ಘಟಕಗಳನ್ನು ಸರ್ಕಾರಿ ಆಸ್ಪತ್ರೆಗಳ ಬಳಿ ನಿರ್ಮಿಸಲಾಗುವುದು.

## 18 ರಾಜ್ಯಗಳಿಗೆ ಕೋವ್ಯಾಕ್ಸಿನ್ ಪೂರೈಕೆ



ನವದೆಹಲಿ, ಮೇ 11 – ಕಳೆದ ಮೇ 1ರಿಂದ ಕರ್ನಾಟಕ ಸೇರಿದಂತೆ 18 ರಾಜ್ಯಗಳಿಗೆ ಕೋವ್ಯಾಕ್ಸಿನ್ ಲಸಿಕೆಗಳ ನೇರ ಪೂರೈಕೆ ಆರಂಭಿಸಿರುವುದಾಗಿ ಭಾರತ್ ಬಯೋಟೆಕ್ ತಿಳಿಸಿದೆ.

ಮೇ 1 ರಿಂದ ರಾಜ್ಯಗಳಿಗೆ ನೇರ ಪೂರೈಕೆ ಆರಂಭಿಸಲಾಗಿದೆ. ನಿರಂತರ ಲಸಿಕೆ ಪೂರೈಸುವಲ್ಲಿ ಅವಿರತವಾಗಿ ಶ್ರಮಿಸುತ್ತಿದ್ದೇವೆ ಎಂದು ಭಾರತ್ ಬಯೋಟೆಕ್ ಹೇಳಿದೆ.

# ಎರಡು ಕೋಟಿ ಲಸಿಕೆಗಾಗಿ ಟೆಂಡರ್

## ಲಸಿಕೆಗೆ ಬೇಡಿಕೆ ಹೆಚ್ಚಾದ ಹಿನ್ನೆಲೆಯಲ್ಲಿ ಖರೀದಿ : ಉಪ ಮುಖ್ಯಮಂತ್ರಿ ಅಶ್ವತ್ಥನಾರಾಯಣ

ಬೆಂಗಳೂರು, ಮೇ 11 - ಎರಡು ಕೋಟಿ ಕೋವಿಡ್ ಲಸಿಕೆಯನ್ನು ಜಾಗತಿಕ ಟೆಂಡರ್ ಮೂಲಕ ಖರೀದಿ ಮಾಡಲಾಗುವುದು ಎಂದು ರಾಜ್ಯ ಕೋವಿಡ್ ಕಾರ್ಯಪಡೆ ಅಧ್ಯಕ್ಷ ಉಪ ಮುಖ್ಯಮಂತ್ರಿ ಡಾ.ಸಿ.ಎನ್.ಅಶ್ವತ್ಥನಾರಾಯಣ ತಿಳಿಸಿದರು.

ಇದರ ಜತೆಗೆ 3 ಕೋಟಿ ವ್ಯಾಕ್ಸಿನ್ ಖರೀದಿಗೆ ಈಗಾಗಲೇ ಬೇಡಿಕೆ ಸಲ್ಲಿಸಲಾಗಿದೆ. ಇದರಲ್ಲಿ 1 ಕೋಟಿ ಕೋವ್ಯಾಕ್ಸಿನ್, 2 ಕೋಟಿ ಕೋವಿಶೀಲ್ಡ್ ಲಸಿಕೆ ಸೇರಿದೆ. 18 ವರ್ಷದಿಂದ ಮೇಲ್ಪಟ್ಟ ಜನರಿಗೆ ಲಸಿಕೆ ಕೊಡಲು ಆರಂಭಿಸಿದ ನಂತರ ಬೇಡಿಕೆ ಹೆಚ್ಚಾಗುತ್ತಿರುವ ಹಿನ್ನೆಲೆಯಲ್ಲಿ ಲಸಿಕೆ ಖರೀದಿ ಮಾಡಲಾಗುತ್ತಿದೆ ಎಂದು ಅವರು ಮಾಹಿತಿ ನೀಡಿದರು.

ಡಿಸಿಎಂ ನೇತೃತ್ವದಲ್ಲಿ ಬೆಂಗಳೂರಿನಲ್ಲಿ ನಡೆದ ಉನ್ನತ ಮಟ್ಟದ ಅಧಿಕಾರಿಗಳ ಸಭೆಯಲ್ಲಿ ಈ ನಿರ್ಧಾರ ಕೈಗೊಳ್ಳಲಾಗಿದೆ. ಆರೋಗ್ಯ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಜಾವೇದ್ ಅಖ್ತರ್, ಔಷಧಿ ಖರೀದಿ ಉಸ್ತುವಾರಿ ಅಂಜುಂ ಪರ್ವೇಜ್, ರಾಜ್ಯ ಔಷಧ ಸರಬರಾಜು ಕಂಪನಿಯ



**1 ಕೋಟಿ ಕೋವ್ಯಾಕ್ಸಿನ್, 2 ಕೋಟಿ ಕೋವಿಶೀಲ್ಡ್ ಲಸಿಕೆ ಖರೀದಿ**

ವ್ಯವಸ್ಥಾಪಕ ನಿರ್ದೇಶಕಿ ಲತಾ ಕುಮಾರಿ, ಆರೋಗ್ಯ ಇಲಾಖೆ ನಿರ್ದೇಶಕ ಓಂ ಪ್ರಕಾಶ್ ಪಾಟೀಲ್ ಸಭೆಯಲ್ಲಿ ಭಾಗಿಯಾಗಿದ್ದರು.

ಸಭೆಯ ನಂತರ ಮಾಹಿತಿ ನೀಡಿದ ಡಿಸಿಎಂ, ಈವರೆಗೂ ಕೇಂದ್ರ ಸರ್ಕಾರ ಹಂಚಿಕೆ ಮಾಡುತ್ತಿದ್ದ ಲಸಿಕೆಯನ್ನು ಬಿಟ್ಟರೆ ನೇರವಾಗಿ ಮುಕ್ತ ಮಾರುಕಟ್ಟೆಯಲ್ಲಿ ಟೆಂಡರ್ ಕರೆದು ಖಾಸಗಿ ಕಂಪನಿಗಳಿಂದ ಖರೀದಿ ಮಾಡಿರಲಿಲ್ಲ. ಇವತ್ತೇ ಟೆಂಡರ್ ಕರೆಯಲು ಸೂಚಿಸಲಾಗಿದ್ದು, ಯಾವ ಕಂಪನಿ ಬೇಕಾದರೂ ಟೆಂಡರ್‌ನಲ್ಲಿ ಭಾಗವಹಿಸಬಹುದು. ಏಳು ದಿನದ ಒಳಗಾಗಿ ಈ ಪ್ರಕ್ರಿಯೆ ಮುಗಿಸಿ ಟೆಂಡರ್ ಪಡೆಯುವ ಕಂಪನಿಯು ಲಸಿಕೆ ಪೂರೈಕೆ ಆರಂಭಿಸಬೇಕು ಎಂದರು.

ಸೋಂಕಿತರಿಗೆ ಅಗತ್ಯವಾದ ಪಲ್ಸ್ ಆಕ್ಸಿಮೀಟರ್ ಖರೀದಿಗೆ ಕ್ರಮ ಕೈಗೊಳ್ಳಲಾಗಿದೆ. ಕೂಡಲೇ ಒಂದು ಲಕ್ಷ ಪಲ್ಸ್‌ಆಕ್ಸಿ ಮೀಟರ್‌ಗಳನ್ನು ಖರೀದಿ ಮಾಡುವಂತೆ ಅಧಿಕಾರಿಗಳಿಗೆ ಸೂಚನೆ ಕೊಡಲಾಗಿದೆ. ಅವುಗಳನ್ನು ಎಲ್ಲ ಜಿಲ್ಲೆ ಮತ್ತು ತಾಲ್ಲೂಕುಗಳಿಗೆ ಹಂಚಲಾಗುವುದು.

ಅವುಗಳನ್ನು ಸುರಕ್ಷಿತವಾಗಿ ಇಟ್ಟುಕೊಳ್ಳುವುದು ಮತ್ತು ಸೋಂಕಿತರು ಗುಣಮುಖರಾದ ನಂತರ ವಾಪಸ್ ಪಡೆಯುವುದು ಆಯಾ ಡಿಎಚ್‌ಒ & ಟಿಎಚ್‌ಒ ಹೊಣೆ. ಈ ಮೂಲಕ ಪಲ್ಸ್‌ಆಕ್ಸಿ ಮೀಟರ್ ಬ್ಯಾಂಕ್ ಮಾಡುವ ಉದ್ದೇಶ ಇದೆ ಎಂದು ಹೇಳಿದರು.

ಸೋಂಕಿತರಿಗೆ ಅತ್ಯಗತ್ಯವಾಗಿ ಬೇಕಾದ ಐವರ್‌ಮೆಕ್ಟಿನ್ ಮಾತ್ರೆಯನ್ನು 10 ಲಕ್ಷ ಖರೀದಿ ಮಾಡಲಾಗಿದ್ದು, (3ನೇ ಪುಟಕ್ಕೆ)

## ಲಾಕ್‌ಡೌನ್‌ನಿಂದ ಸೋಂಕು ಇಳಿಕೆ



ಬೆಂಗಳೂರು, ಮೇ 11- ಕರ್ಫ್ಯೂ ಹಾಗೂ ಲಾಕ್‌ಡೌನ್ ಕಟ್ಟು ನಿಟ್ಟಾಗಿ ಜಾರಿಗೊಳಿಸಿದ್ದರಿಂದ ರಾಜ್ಯದಲ್ಲಿ ಸೋಂಕಿನ ಪ್ರಕರಣಗಳು ಕೊಂಚ ಇಳಿಮುಖವಾಗುತ್ತಿವೆ ಎಂದು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ತಿಳಿಸಿದ್ದಾರೆ.

ಸಾರ್ವಜನಿಕರು ಸರ್ಕಾರದ ಜೊತೆ ಕೈ ಜೋಡಿಸಿ, ಮಾರ್ಗಸೂಚಿಗಳನ್ನು ಚಾಚೂ ತಪ್ಪದೇ ಪಾಲನೆ ಮಾಡಿದರೆ ರಾಜ್ಯವನ್ನು ಕೊರೊನಾ ಮುಕ್ತಗೊಳಿಸಲು ಸಾಧ್ಯ ಎಂದರು.

ರಾಜ್ಯದಲ್ಲಿ ಎರಡನೇ ಅಲೆ ಬಹಳ ವೇಗವಾಗಿ ಹರಡಿ, ಪ್ರತಿನಿತ್ಯ 50 ಸಾವಿರ ಪ್ರಕರಣಗಳಿಗೂ ಹೆಚ್ಚು ದಾಖಲಾಗುತ್ತಿದ್ದವು. ಕಳೆದ 2 ದಿನಗಳಿಂದ 37 ಸಾವಿರ ಆಸುಪಾಸಿಗೆ ಬಂದು ನಿಂತಿದೆ. ಮುಂದಿನ ದಿನಗಳಲ್ಲಿ ಸೋಂಕು ಕಡಿಮೆಯಾಗುತ್ತದೆ ಎಂಬ ವಿಶ್ವಾಸ ವ್ಯಕ್ತಪಡಿಸಿದರು.

ರಾಜ್ಯದಲ್ಲಿ ಲಸಿಕೆ ಬಗ್ಗೆ ಯಾವುದೇ ಸಮಸ್ಯೆ ಇಲ್ಲ. ಈ ಬಗ್ಗೆ ಯಾರಿಗೂ ಗೊಂದಲ ಬೇಡ. ಕೇಂದ್ರದಿಂದ ನಮಗೆ ಲಸಿಕೆ ಬರುತ್ತಿದ್ದಂತೆ, ಅದನ್ನು ಹಂಚಲಾಗುವುದು. ಎಲ್ಲರಿಗೂ ಲಸಿಕೆ ದೊರೆಯಲಿದೆ ಎಂದರು.

ಲಾಕ್‌ಡೌನ್ ಜಾರಿಗೊಳಿಸಿರುವ ಪರಿಣಾಮ ಸಂಕಷ್ಟದಲ್ಲಿರುವ ಶ್ರಮಿಕ ವರ್ಗಕ್ಕೆ ವಿಶೇಷ ಆರ್ಥಿಕ ಪ್ಯಾಕೇಜ್ ಘೋಷಣೆ ಮಾಡುವ ಬಗ್ಗೆ ಯಾವುದೇ ತೀರ್ಮಾನ ಕೈಗೊಂಡಿಲ್ಲ ಎಂದವರು ಹೇಳಿದ್ದಾರೆ. (3ನೇ ಪುಟಕ್ಕೆ)

## ಆರೋಗ್ಯ ಇಲಾಖೆ ಸಿಬ್ಬಂದಿಗೆ ದೊರೆಯದ ಮಾಸ್ಕ್, ಸ್ಯಾನಿಟೈಸರ್

ಜಗಳೂರು, ಮೇ 11- ಕೋವಿಡ್ 19 ಎರಡನೇ ಅಲೆ ತೀವ್ರವಾಗುತ್ತಿದ್ದು, ತಾಲ್ಲೂಕಿನಲ್ಲಿ ಕೊರೊನಾ ಪ್ರಕರಣಗಳ ಸಂಖ್ಯೆ ದಿನೇ ದಿನೇ ಹೆಚ್ಚಾಗುತ್ತಿದೆ. ತಾಲ್ಲೂಕಿನ ಆರೋಗ್ಯ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ನೂರಾರು ನೌಕರರಿಗೆ ಇಲಾಖೆಯಿಂದ ಈವರೆಗೂ ಮಾಸ್ಕ್ ಮತ್ತು ಸ್ಯಾನಿಟೈಸರ್ ವಿತರಿಸದೇ ಇರುವುದರಿಂದ ನೌಕರರು ಆತಂಕದಲ್ಲಿಯೇ ಕಾರ್ಯನಿರ್ವಹಿಸುವಂತಾಗಿದೆ.

ಆರೋಗ್ಯ ಇಲಾಖೆಯ ಎಲ್ಲಾ ಸಿಬ್ಬಂದಿ ವರ್ಗದವರು ತಮ್ಮ ಸ್ವಂತ ಖರ್ಚಿನಿಂದಲೇ ಸ್ಯಾನಿಟೈಸರ್ ಮತ್ತು ಮಾಸ್ಕ್ ಖರೀದಿಸಿ, ಕಾರ್ಯನಿರ್ವಹಿಸುತ್ತಿದ್ದಾರೆ.

ಪ್ರತಿದಿನ ಗುಣಮಟ್ಟದ ಮಾಸ್ಕ್ ಮತ್ತು ಸ್ಯಾನಿಟೈಸರ್ ಬಳಸುವುದು ಆರೋಗ್ಯ ಇಲಾಖೆ ನೌಕರರಿಗೆ ಅನಿವಾರ್ಯವಾಗಿರುತ್ತದೆ. ಹಾಗಾಗಿ ತಮ್ಮ ಸ್ವಂತ ಜೇಬಿನಿಂದಲೇ ಹಣ ಖರ್ಚು ಮಾಡಿ ಮಾಸ್ಕ್ ಮತ್ತು ಸ್ಯಾನಿಟೈಸರ್ ಬಳಸುತ್ತಿದ್ದೇವೆ ಎನ್ನುತ್ತಾರೆ ಹೆಸರು ಹೇಳಲಿಚ್ಚಿಸದ ನೌಕರರು. (3ನೇ ಪುಟಕ್ಕೆ)

### ಆಡಳಿತ ಅಧಿಕಾರಿಗಳು ಹೇಳುವುದೇನು?

ಈ ಕುರಿತು ಆರೋಗ್ಯ ಇಲಾಖೆಯ ತಾಲ್ಲೂಕು ವೈದ್ಯಾಧಿಕಾರಿ ಡಾ. ನಾಗರಾಜ್ ಅವರನ್ನು ಸಂಪರ್ಕಿಸಿದಾಗ, ಆರೋಗ್ಯ ಇಲಾಖೆ ಸಿಬ್ಬಂದಿಗೆ ಮತ್ತು ಆಶಾ ಕಾರ್ಯಕರ್ತರಿಗೆ ಮಾಸ್ಕ್ ಮತ್ತು ಸ್ಯಾನಿಟೈಸರ್ ವಿತರಿಸಲು ನಮ್ಮಲ್ಲಿ ಯಾವುದೇ ಅನುದಾನ ಲಭ್ಯವಿಲ್ಲ. ಅನುದಾನ ಮಂಜೂರಾದರೆ ಇಲಾಖೆಯಿಂದ ಮಾಸ್ಕ್ ಮತ್ತು (3ನೇ ಪುಟಕ್ಕೆ)

## ಲಸಿಕೆಗೆ ಗಲಾಟೆ, ಆಕ್ಸಿಜನ್‌ಗೆ ಸರದಿ, ಜನರಿಗೆ ನೆರವಿಲ್ಲ

### ಕೊರೊನಾ ಸಾವುಗಳನ್ನು ಮುಚ್ಚಿಡಲಾಗುತ್ತಿದೆ : ಪಾಲಿಕೆ ವಿಪಕ್ಷ ನಾಯಕ ಎ. ನಾಗರಾಜ್ ಆಕ್ರೋಶ



ದಾವಣಗೆರೆ, ಮೇ 11 - ಹದಿನೆಂಟು ವರ್ಷ ಮೀರಿದವರಿಗೆ ಲಸಿಕೆ ನೀಡುವ ಕೇಂದ್ರಗಳಲ್ಲಿ ಅವ್ಯವಸ್ಥೆಯಾಗಿದೆ. ನೂಕು - ನುಗ್ಗಲು, ಗಲಾಟೆಗಳು ನಡೆಯುತ್ತಿವೆ. ಲಸಿಕೆಗಾಗಿ ಆನ್‌ಲೈನ್ ನೋಂದಣಿ ವ್ಯವಸ್ಥೆ ಜನರಿಗೆ ಕೈಗೆಟುಕದಂತಾಗಿದೆ ಎಂದು ಪಾಲಿಕೆ ವಿಪಕ್ಷ ನಾಯಕ ಎ. ನಾಗರಾಜ್ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಪತ್ರಕರ್ತರೊಂದಿಗೆ ಮಾತನಾಡುತ್ತಿದ್ದ ಅವರು, ಆಕ್ಸಿಜನ್ ಪೂರೈಕೆ ಅಸಮರ್ಪಕವಾಗಿದ್ದು ಹರಿಹರದ ಸದರನ್ ಗ್ಯಾಸ್ ಕಂಪನಿ ಎದುರು ಖಾಸಗಿ ಆಸ್ಪತ್ರೆಗಳು ಸರದಿಯಲ್ಲಿ ನಿಲ್ಲುವಂತಾಗಿದೆ ಎಂದವರು ಹೇಳಿದರು.

ಜಿಲ್ಲಾಡಳಿತ ಸಾವಿನ ಸಂಖ್ಯೆಯನ್ನು ಮುಚ್ಚಿಡುತ್ತಿದೆ. ಸಿ.ಜಿ. ಆಸ್ಪತ್ರೆಗೆ ತಾವು ಭೇಟಿ ನೀಡಿದಾಗ ಐವರು ರೋಗಿಗಳಿಗೆ ವೆಂಟಿಲೇಟರ್‌ಗಳೇ ಸಿಕ್ಕಿರಲಿಲ್ಲ. ಹರಿಹರದಲ್ಲಿ ನಿನ್ನೆ ಐದು ಸಾವುಗಳು ಸಂಭವಿಸಿವೆ. ಆದರೆ, ಕೇವಲ ಒಂದು ತೋರಿಸಿದ್ದಾರೆ. ಪಾಸಿಟಿವ್ ಪ್ರಕರಣಗಳನ್ನೂ ಮುಚ್ಚಿಡುತ್ತಿದ್ದಾರೆ ಎಂದವರು ಆರೋಪಿಸಿದರು.

ಕಳೆದ 20 ದಿನಗಳಿಂದ ಜನರ ಮೇಲೆ ನಿರ್ಬಂಧಗಳನ್ನು ಹೇರಲಾಗಿದೆ. ಜನರು ಉದ್ಯೋಗವಿಲ್ಲದೇ ಆದಾಯ ಕಳೆದುಕೊಂಡಿದ್ದಾರೆ. ಇಂತಹ ಸಂದರ್ಭದಲ್ಲೂ ಸರ್ಕಾರ ಹಾಗೂ ಪಾಲಿಕೆಯಿಂದ ಜನರಿಗೆ ಯಾವುದೇ ನೆರವು ಕೊಟ್ಟಿಲ್ಲ ಎಂದು ನಾಗರಾಜ್ ಟೀಕಿಸಿದರು.

**ಲಸಿಕೆ ಅವ್ಯವಸ್ಥೆ :** 18 ವರ್ಷ ಮೀರಿದವರಿಗೆ ಲಸಿಕೆ ನೀಡಲು ನಗರದ ಸಿ.ಜಿ. ಆಸ್ಪತ್ರೆ ಹಾಗೂ ಹೆರಿಗೆ ಆಸ್ಪತ್ರೆಯಲ್ಲಿ ವ್ಯವಸ್ಥೆ ಮಾಡಲಾಗಿದೆ. ಆದರೆ, ಕೇವಲ 150 ಜನರಿಗೆ ಲಸಿಕೆ ನೀಡಲಾಗುತ್ತಿದೆ. ಆನ್‌ಲೈನ್ ನಲ್ಲಿ ನೋಂದಣಿ ಮಾಡಿದವರಿಗೆ ಮಾತ್ರ ಲಸಿಕೆ ಎಂದು ಸರದಿಯಲ್ಲಿ ಬಂದವರನ್ನು ವಾಪಸ್ ಕಳಿಸಲಾಗುತ್ತಿದೆ ಎಂದವರು ಹೇಳಿದರು.

ಇದರಿಂದಾಗಿ ಲಸಿಕಾ ಕೇಂದ್ರಗಳಲ್ಲಿ ನೂಕು ನುಗ್ಗಲು, ಗಲಾಟೆಗಳು ನಡೆಯುತ್ತಿವೆ. ಲಸಿಕೆ ಪೋಲಾದರೂ ಸರಿಯೇ ಸರದಿಯಲ್ಲಿ ಬರದವರಿಗೆ ಕೊಡುವುದಿಲ್ಲ ಎನ್ನುತ್ತಿದ್ದಾರೆ ಎಂದು ನಾಗರಾಜ್ ಆರೋಪಿಸಿದರು.

ಪ್ರತಿದಿನ ವಯಸ್ಸಾದವರು ಲಸಿಕಾ ಕೇಂದ್ರಗಳಿಗೆ ಬೆಳಿಗ್ಗೆ 5 ಗಂಟೆಯಿಂದಲೇ ಸರದಿಯಲ್ಲಿ ನಿಲ್ಲುತ್ತಾರೆ. ಬೆಳಿಗ್ಗೆ 10 ಗಂಟೆಯ ವೇಳೆಗೆ ಸಿಬ್ಬಂದಿ ಬಂದು ಲಸಿಕೆ ಇದ್ದರೆ ಕೊಡುತ್ತಾರೆ, ಇಲ್ಲದಿದ್ದರೆ ನಾಳೆ ಬನ್ನಿ ಎನ್ನುತ್ತಿದ್ದಾರೆ. ಲಸಿಕಾ ಕೇಂದ್ರಗಳೇ ಕೊರೊನಾ ಹರಡುವಂತಾಗಿದೆ ಎಂದರು.

**ವೃದ್ಧರಿಗೂ ನೆರವಿಲ್ಲ :** ಎಂ.ಸಿ.ಸಿ. ಎ ಬ್ಲಾಕ್‌ನಲ್ಲಿರುವ ವೃದ್ಧಾಶ್ರಮದಲ್ಲಿ 85-90 ವರ್ಷದ 20 ವೃದ್ಧರಿದ್ದಾರೆ. ಇವರಿಗೆ ಲಸಿಕೆ ಕೊಡಿ ಎಂದು ಜಿಲ್ಲಾಡಳಿತಕ್ಕೆ ಕೇಳಿದರೂ ನಿರ್ಲಕ್ಷಿಸಲಾಗುತ್ತಿದೆ ಎಂದವರು ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಪಾಲಿಕೆ ಸದಸ್ಯರಾದ ಗಡಿಗುಡಾಳ್ ಮಂಜುನಾಥ್, ಕೆ. ಚಮನ್ ಸಾಬ್, ಮುಖಂಡರಾದ ಹುಲ್ಮನಿ ಗಣೇಶ್ ಉಪಸ್ಥಿತರಿದ್ದರು.

### ವೈಯಕ್ತಿಕ ಕೆಲಸಕ್ಕಾಗಿ ಬರುತ್ತಿರುವ ಉಸ್ತುವಾರಿ ಸಚಿವರು

ಜಿಲ್ಲಾ ಉಸ್ತುವಾರಿ ಸಚಿವ ಭೈರತಿ ಬಸವರಾಜ ಅವರಿಂದ ಕೊರೊನಾ ಸಮಸ್ಯೆ ಬಗೆಹರಿಸಲು ಯಾವುದೇ ನೆರವಾಗಿಲ್ಲ. ಅವರು ವೈಯಕ್ತಿಕ ಕೆಲಸಕ್ಕಾಗಿ ಮಾತ್ರ ಜಿಲ್ಲೆಗೆ ಬರುತ್ತಿದ್ದಾರೆ. ಅವರು ನಾಮಕಾವಸ್ಥೆ ಜಿಲ್ಲಾ ಮಂತ್ರಿ ಎಂದು ಪಾಲಿಕೆ ಪ್ರತಿಪಕ್ಷದ ನಾಯಕ ಎ. ನಾಗರಾಜ್ ತರಾಟೆಗೆ ತೆಗೆದುಕೊಂಡಿದ್ದಾರೆ.

ವೈಯಕ್ತಿಕ ಕೆಲಸ ಎಂದರೆ ಏನು ಎಂಬುದಕ್ಕೆ ನೇರವಾಗಿ ಉತ್ತರಿಸದ ಅವರು, ಬೇರೆ ಕೆಲಸ ಮಾಡಿಕೊಳ್ಳಲು ಮಾತ್ರ ಸಚಿವರು ಬರುತ್ತಿದ್ದಾರೆ ಎಂದರು.

ಸಚಿವರು ಬಂದಾಗ ಜನಪ್ರತಿನಿಧಿಗಳ ಸಭೆ ಕರೆದಿಲ್ಲ. 5-6 ಲಕ್ಷ ಜನಸಂಖ್ಯೆ ಇರುವ ದಾವಣಗೆರೆ ಪ್ರತಿನಿಧಿಗಳನ್ನು ಭೇಟಿ ಮಾಡಿಲ್ಲ. ಅಧಿಕಾರಿಗಳು ಹೇಳಿದ್ದನ್ನೇ ಪರಿಗಣಿಸಿ ತೆರಳುತ್ತಿದ್ದಾರೆ ಎಂದು ಹೇಳಿದರು.

ಸಚಿವರಿಂದ ಆಕ್ಸಿಜನ್ ಕೊರತೆ ನೀಗಿಸುವುದು, ಬೆಡ್‌ಗಳ ಸಂಖ್ಯೆ ಹೆಚ್ಚಿಸುವುದು, ಲಸಿಕೆ ಸೇರಿದಂತೆ ಯಾವುದೇ ವಿಷಯಕ್ಕೂ ಅನುಕೂಲ ಆಗಿಲ್ಲ ಎಂದವರು ಟೀಕಿಸಿದರು. ಬೇರೆ ಜಿಲ್ಲೆಗಳಿಗೆ ಹೋಲಿಸಿದರೆ ದಾವಣಗೆರೆಯಲ್ಲಿ ಪರಿಸ್ಥಿತಿ ಉತ್ತಮವಾಗಿದೆ ಎಂಬ ಆಡಳಿತಾರೂಢರ ಹೇಳಿಕೆಯನ್ನು ತಳ್ಳಿ ಹಾಕಿದ ನಾಗರಾಜ್, ಅವರ ಬೆನ್ನನ್ನು ಅವರೇ ತಟ್ಟಿಕೊಳ್ಳುತ್ತಿದ್ದಾರೆ ಎಂದು ಲೇವಡಿ ಮಾಡಿದರು.

### ಬೂತ್ ಮಟ್ಟದಲ್ಲಿ ಲಸಿಕೆ ಕೊಡಿ

ಬೂತ್ ಮಟ್ಟದಲ್ಲಿ ಲಸಿಕೆ ಕೊಟ್ಟರೆ ನೂಕು ನುಗ್ಗಲು ನಿವಾರಣೆಯಾಗಲಿದೆ. ನಗರದಲ್ಲಿ 400ರಷ್ಟು ಬೂತ್‌ಗಳಿದ್ದು, ಲಭ್ಯವಿರುವ ಲಸಿಕೆಗಳನ್ನು ಈ ಹಂತದಲ್ಲೇ ವಿತರಣೆ ಮಾಡಬೇಕು ಎಂದು ಪ್ರತಿಪಕ್ಷದ ನಾಯಕ ಎ. ನಾಗರಾಜ್ ಸಲಹೆ ನೀಡಿದ್ದಾರೆ.

## ಭಾರತದಲ್ಲಿ ಲಸಿಕೆ ಉತ್ಪಾದಿಸಲು ಅಮೆರಿಕ ಆಸಕ್ತಿ

ನವದೆಹಲಿ, ಮೇ 11 – ಜಾನ್ಸನ್ ಅಂಡ್ ಜಾನ್ಸನ್ ಕೊರೊನಾ ಲಸಿಕೆಯನ್ನು ಭಾರತದಲ್ಲಿ ಉತ್ಪಾದಿಸಲು ಅಮೆರಿಕ ಉದ್ದೇಶಿಸಿದೆ ಎಂದು ಅಮೆರಿಕದ ರಾಯಭಾರಿ ಕಚೇರಿಯ ಉನ್ನತ ಅಧಿಕಾರಿ ಡೇನಿಯಲ್ ಬಿ. ಸ್ಮಿತ್ ತಿಳಿಸಿದ್ದಾರೆ.

ಸೆರಮ್ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯಾದಂತಹ ಕಂಪನಿಗಳ ಜೊತೆಗೂಡಿ ಲಸಿಕೆ (3ನೇ ಪುಟಕ್ಕೆ)

## ತಿಂಗಳಲ್ಲಿ 6ನೇ ಬಾರಿ ತೈಲ ಬೆಲೆ ಏರಿಕೆ

ನವದೆಹಲಿ ಮೇ 11 – ಪೆಟ್ರೋಲ್ ಹಾಗೂ ಡೀಸೆಲ್ ಬೆಲೆ ಏರುವುದು ಮುಂದುವರೆದಿದ್ದು, ಈ ತಿಂಗಳಲ್ಲಿ ಆರನೇ ಬಾರಿಗೆ ಬೆಲೆ ಏರಿಕೆ ಮಾಡಲಾಗಿದೆ. ಮಹಾರಾಷ್ಟ್ರ, ರಾಜಸ್ಥಾನ ಹಾಗೂ ಮಧ್ಯಪ್ರದೇಶದ ಹಲವು ಕಡೆಗಳಲ್ಲಿ ಪೆಟ್ರೋಲ್ ದರ 100 ರೂ.ಗಳ ಗಡಿ ದಾಟಿದೆ.

ಪೆಟ್ರೋಲ್ ಬೆಲೆ ಲೀಟರ್‌ಗೆ 27 ಪೈಸೆ ಹಾಗೂ ಡೀಸೆಲ್ ಬೆಲೆ ಲೀಟರ್‌ಗೆ 30 ಪೈಸೆ ಹೆಚ್ಚಿಸಲಾಗಿದೆ ಎಂದು ಸರ್ಕಾರಿ ಸ್ವಾಮ್ಯದ ತೈಲ ಕಂಪನಿಗಳು (3ನೇ ಪುಟಕ್ಕೆ)

**ಜಮೀನು ಮಾರಾಟಕ್ಕಿದೆ**

ಹಿರೇಮೇಗಳಗೆರೆ ಸಮೀಪದಲ್ಲಿ 5.53 ಮತ್ತು 6.55 ಎಕರೆ ಕಾರ್ನರ್ ಒಟ್ಟು ವಿಸ್ತೀರ್ಣ 12.08 ಎಕರೆ, ಕೆಂಪು ಮಣ್ಣಿನ ಜಮೀನು ಮಾರಾಟಕ್ಕಿದೆ. 3 ಬೋರ್‌ಗಳಿವೆ. ಕಾಡಜ್ಜಿ ಕೃಷಿ ವಿಜ್ಞಾನ ಕೇಂದ್ರದಿಂದ 3 ಕಿಲೋಮಿಟರ್‌ದಲ್ಲಿದೆ. ದಾವಣಗೆರೆಯಿಂದ 10 ಕಿ.ಮೀ.ನಲ್ಲಿದೆ.

ಬೂಸ್ನೂರು ಕಿರಣ್ (ಏಜೆಂಟ್)
98440 63409, 97315 63409

## ಇಂದಿರಾ ಕ್ಯಾಂಟೀನ್‌ನಲ್ಲಿ ಮೇ 24ರವರೆಗೆ ಉಚಿತ ಆಹಾರ

ಬೆಂಗಳೂರು, ಮೇ 11 - ಶ್ರಮಿಕ ವರ್ಗಕ್ಕೆ ಇಂದಿನಿಂದ ಉಚಿತವಾಗಿ ಇಂದಿರಾ ಕ್ಯಾಂಟೀನ್‌ನಲ್ಲಿ ಮೇ 24 ರವರೆಗೂ ಆಹಾರ ನೀಡಲಾಗುತ್ತಿದೆ.

ಪತ್ರಿಕಾ ಹೇಳಿಕೆಯಲ್ಲಿ ಈ ವಿಷಯ ತಿಳಿಸಿರುವ ಪೌರಾಡಳಿತ ಸಚಿವ ಎಂಟಿಬಿ ನಾಗರಾಜ್ ಇಂದಿರಾ ಕ್ಯಾಂಟೀನ್‌ಗಳಲ್ಲಿ ಬೆಳಗಿನ ಉಪಹಾರ, ಮಧ್ಯಾಹ್ನ ಹಾಗೂ ರಾತ್ರಿ ಊಟವನ್ನು ಉಚಿತವಾಗಿ ನೀಡಲಾಗುವುದು.

ಬೆಂಗಳೂರು ಮಹಾನಗರ ಪಾಲಿಕೆ ಹೊರತುಪಡಿಸಿ, ಉಳಿದ ಪುರಸಭೆ, ನಗರಸಭೆ ಹಾಗೂ ಪಟ್ಟಣ ಪಂಚಾಯಿತಿ ಸೇರಿದಂತೆ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯ ಇಂದಿರಾ ಕ್ಯಾಂಟೀನ್‌ಗಳಲ್ಲಿ ಈ ಸೌಲಭ್ಯ ದೊರೆಯಲಿದೆ ಎಂದಿದ್ದಾರೆ.

## ಜಿಲ್ಲೆಯಲ್ಲಿ 212 ಪ್ರಕರಣ

ದಾವಣಗೆರೆ, ಮೇ 11 – ಜಿಲ್ಲೆಯಲ್ಲಿ ಮಂಗಳವಾರ 212 ಕೊರೊನಾ ಸೋಂಕಿತರು ಕಂಡು ಬಂದಿದ್ದು, ಮೂವರು ಸಾವನ್ನಪ್ಪಿದ್ದಾರೆ.

ಇದೇ ದಿನ 107 ಜನ ಕೊರೊನಾದಿಂದ ಗುಣಮುಖರಾಗಿದ್ದು, ಸಕ್ರಿಯ ಸೋಂಕಿತರ ಸಂಖ್ಯೆ 3,208ಕ್ಕೆ ತಲುಪಿದೆ. ಹರಿಹರದ ಹರ್ಲಾಪುರ ಹಾಗೂ ನಿಟ್ಟೂರಿನಲ್ಲಿ ಒಟ್ಟು ಇಬ್ಬರು ಹಾಗೂ ದಾವಣಗೆರೆಯ ಶಾಮನೂರಿನಲ್ಲಿ ಒಬ್ಬರು ಸಾವನ್ನಪ್ಪಿದ್ದಾರೆ. ದಾವಣಗೆರೆ ತಾಲ್ಲೂಕಿನಲ್ಲಿ 111 ಸೋಂಕಿತರು (3ನೇ ಪುಟಕ್ಕೆ)

## ಕೊರೊನಾ ಪರಿಸ್ಥಿತಿ ಸುಧಾರಣೆಯ ಲಕ್ಷಣ ಗೋಚರ

ನವದೆಹಲಿ, ಮೇ 11 – ದೇಶದಲ್ಲಿ ಕೊರೊನಾ ಪರಿಸ್ಥಿತಿ ಸುಧಾರಿಸುವ ಆರಂಭಿಕ ಲಕ್ಷಣಗಳು ದೊರೆತಿವೆ. ದೇಶಾದ್ಯಂತ ಹೊಸ ಕೊರೊನಾ ಸೋಂಕು ಪ್ರಕರಣಗಳು ಹಾಗೂ ಸಾವುಗಳ ಸಂಖ್ಯೆ ಕಡಿಮೆಯಾಗಿದೆ ಎಂದು ಕೇಂದ್ರ ಸರ್ಕಾರ ತಿಳಿಸಿದೆ.

**ದೇಶದಲ್ಲಿ ಹೊಸ ಸೋಂಕಿತರಿಗಿಂತ ಚೇತರಿಸಿಕೊಂಡವರೇ ಹೆಚ್ಚು**

ಸರ್ಕಾರದ ವರದಿಯ ಪ್ರಕಾರ ಮಹಾ ರಾಷ್ಟ್ರ, ಉತ್ತರ ಪ್ರದೇಶ, ದೆಹಲಿ ಹಾಗೂ ಛತ್ತೀಸ್ ಘಡ ಸೇರಿದಂತೆ 18 ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳಲ್ಲಿ ದೈನಂದಿನ ಸೋಂಕಿನ ಪ್ರಮಾಣ ಇಳಿಮುಖವಾಗಿದೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿರುವ ಹಿರಿಯ ಅಧಿಕಾರಿಗಳು, ಕರ್ನಾಟಕ, ಕೇರಳ, ತಮಿಳುನಾಡು, ಪಶ್ಚಿಮ ಬಂಗಾಳ ಹಾಗೂ ಪಂಜಾಬ್ ಸೇರಿದಂತೆ 16 ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳಲ್ಲಿ (3ನೇ ಪುಟಕ್ಕೆ)

## ಗೋವಾ ಸರ್ಕಾರಿ ಆಸ್ಪತ್ರೆಯಲ್ಲಿ 26 ಕೊರೊನಾ ಸೋಂಕಿತರ ಸಾವು

ಪಣಜಿ, ಮೇ 11 – ಗೋವಾದ ಸರ್ಕಾರಿ ಸ್ವಾಮ್ಯದ ಜಿ.ಎಂ.ಸಿ.ಹೆಚ್. ಆಸ್ಪತ್ರೆಯಲ್ಲಿ ಬೆಳಗಿನ ಜಾವ 26 ಕೊರೊನಾ ರೋಗಿಗಳು ಸಾವನ್ನಪ್ಪಿದ್ದು, ಈ ಬಗ್ಗೆ ಹೈಕೋರ್ಟ್ ತನಿಖೆ ನಡೆಸಬೇಕು ಎಂದು ಗೋವಾದ ಆರೋಗ್ಯ ಸಚಿವ ವಿಶ್ವಜಿತ್ ರಾಣೆ ಹೇಳಿದ್ದಾರೆ.

ಬೆಳಗಿನ ಜಾವ 2 ಗಂಟೆಯಿಂದ 6 ಗಂಟೆ ನಡುವೆ (3ನೇ ಪುಟಕ್ಕೆ)

## ಕೊರೊನಾಗೆ ಮನೆಯಲ್ಲೇ ಚಿಕಿತ್ಸೆ ಪಡೆಯುತ್ತಿರುವವರಿಗೆ ಉಚಿತ ಆಹಾರ



ದಾವಣಗೆರೆ, ಮೇ 11 - ಪ್ರೇರಣ ಯುವ ಸಂಸ್ಥೆ ವತಿಯಿಂದ ನಗರದಲ್ಲಿ ಕೊರೊನಾ ವೈರಸ್‌ಗೆ ಸಿಲುಕಿ ಮನೆಯಲ್ಲೇ ಚಿಕಿತ್ಸೆ ಪಡೆಯುತ್ತಿರುವವರಿಗೆ ಪ್ರತಿನಿತ್ಯ 3 ಹೊತ್ತಿನ ಊಟ ಪೂರೈಕೆ ಮಾಡುವುದಾಗಿ ಪಾಲಿಕೆ ಮೇಯರ್ ಎಸ್.ಟಿ. ವೀರೇಶ್ ತಿಳಿಸಿದ್ದಾರೆ.

ಪಾಲಿಕೆಯಲ್ಲಿ ಕರೆದಿದ್ದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡುತ್ತಿದ್ದ ಅವರು, ದಾವಣಗೆರೆ ನಗರಕ್ಕೆ ಮಾತ್ರ ಈ ಸೌಲಭ್ಯ ಸೀಮಿತವಾಗಿದೆ. ಬೆಳಗಿನ ಉಪಹಾರ, ಮಧ್ಯಾಹ್ನದ ಭೋಜನ ಹಾಗೂ ರಾತ್ರಿಯ ಊಟವನ್ನು ಸೋಂಕಿತರ ಮನೆ ಬಾಗಿಲಿಗೆ ತಂದು ಕೊಡಲಾಗುವುದು. ಇದಕ್ಕಾಗಿ ಬೈಕ್‌ನಲ್ಲಿ ಆಹಾರ ಪೂರೈಸುವ ವರ ತಂಡವೊಂದನ್ನು ರಚಿಸಲಾಗಿದೆ ಎಂದು ತಿಳಿಸಿದ್ದಾರೆ.


ಆಹಾರದ ನೆರವು ಬೇಕಾದವರು ಎಸ್.ಆರ್.ಎಫ್. ಸಂಖ್ಯೆ ಹಾಗೂ ವಿಳಾಸವನ್ನು ಮೊಬೈಲ್ ಸಂಖ್ಯೆ : 99459 77433ಗೆ ಕಳಿಸಬೇಕು. ಬೆಳಗಿನ ಉಪಹಾರಕ್ಕೆ ಹಿಂದಿನ ದಿನವೇ ಸಂಜೆ 7ರಿಂದ 9ರವರೆಗೆ, ಮಧ್ಯಾಹ್ನದ ಭೋಜನಕ್ಕೆ ಅದೇ ದಿನ ಬೆಳಿಗ್ಗೆ 9ರಿಂದ 11ರವರೆಗೆ ಹಾಗೂ ರಾತ್ರಿಯ ಊಟಕ್ಕೆ

**ನಗರದಲ್ಲಿ ಪ್ರೇರಣ ಯುವ ಸಂಸ್ಥೆ ವತಿಯಿಂದ ಮನೆ ಬಾಗಿಲಿಗೆ ಆಹಾರ**
**- ಮೇಯರ್ ಎಸ್.ಟಿ. ವೀರೇಶ್**

ಮಧ್ಯಾಹ್ನ 4ರಿಂದ ಸಂಜೆ 6ರವರೆಗೆ ಕರೆ ಮಾಡಿ ಇಲ್ಲವೇ ಮೆಸೇಜ್ ಮೂಲಕ ತಿಳಿಸಬೇಕು ಎಂದವರು ಹೇಳಿದ್ದಾರೆ.

ಈ ಕಾರ್ಯಕ್ರಮದಲ್ಲಿ ದಾವಣಗೆರೆ ಜಿಲ್ಲಾ ಖಾಸಗಿ ಪದವಿಪೂರ್ವ ಕಾಲೇಜುಗಳ ಆಡಳಿತ (3ನೇ ಪುಟಕ್ಕೆ)

## ಉಕ್ಕಿನ ಮಹಿಳೆ ಗೌರಿ ಅಮ್ಮ ನಿಧನ



ತಿರುವನಂತಪುರಂ, ಮೇ 11 – ಮಾರ್ಕ್ಸ್‌ವಾದದ ಸಿಡಿಗುಂಡಿನ ನಾಯಕಿ ಹಾಗೂ ಮಾಜಿ ಸಚಿವೆ ಕೆ.ಆರ್. ಗೌರಿ ಅವರು ನಿಧನರಾಗಿದ್ದಾರೆ. ಕೇರಳದಲ್ಲಿ ಕಮ್ಯುನಿಸ್ಟ್ ಚಳುವಳಿಯ ಸಂಸ್ಥಾಪಕರಲ್ಲಿ ಒಬ್ಬರಾಗಿದ್ದ ಅವರು, ರಾಜ್ಯದ ಮೊದಲ ಸಂಪುಟದ ಏಕೈಕ ಮಹಿಳಾ ಸದಸ್ಯೆಯೂ ಆಗಿದ್ದರು.

102 ವರ್ಷದ ಗೌರಿ, ವಯೋ ಸಂಬಂಧಿ ಸಮಸ್ಯೆಗಳಿಂದ ಬಳಲುತ್ತಿದ್ದರು. ಅವರು ಖಾಸಗಿ ಆಸ್ಪತ್ರೆಯಲ್ಲಿ ನಿಧನರಾಗಿದ್ದಾರೆ.

ಕೇರಳ ರಾಜಕೀಯದ ಬಲಿಷ್ಠ ನಾಯಕರಲ್ಲಿ ಒಬ್ಬರಾಗಿದ್ದ ಅವರು, ಗೌರಿ ಅಮ್ಮ ಎಂದೇ ಹೆಸರಾಗಿದ್ದರು. ಪಾಳೆಗಾರಿಕೆ ಪದ್ಧತಿ ವಿರುದ್ಧ ದಿಟ್ಟ ಹೋರಾಟ ನಡೆಸಿದ್ದ ಅವರು, (2ನೇ ಪುಟಕ್ಕೆ)

## ವಿ.ಕೆ.ವೆಂಕಟೇಶ್ ನಿಧನ



ದಾವಣಗೆರೆ ಎಂ.ಸಿ.ಸಿ.'ಬಿ' ಬ್ಲಾಕ್ ವಾಸಿ ಹಾಗೂ ಹದಡಿ ವಿ.ಕೃಷ್ಣಶೆಟ್ಟಿ ದಲ್ಲಾಳಿ ಅಂಗಡಿ ಮಾಲೀಕರೂ ಆಗಿದ್ದ **ಶ್ರೀ ವಿ.ಕೆ.ವೆಂಕಟೇಶ್** (59) ಅವರು ದಿ: 11-5-2021ರ ಮಂಗಳವಾರ ಬೆಳಿಗ್ಗೆ 8-53ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಪತ್ನಿ, ಓರ್ವ ಪುತ್ರ, ಇಬ್ಬರು ಪುತ್ರಿಯರು, ಅಳಿಯಂದಿರು, ಸಹೋದರ- ಸಹೋದರಿಯರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಶ್ರೀಯುತರ ಅಂತ್ಯಕ್ರಿಯೆಯು ದಿ: 11-5-2021ರಂದೇ ಮಧ್ಯಾಹ್ನ 12.30ಕ್ಕೆ ನಗರದ ಲೇಬರ್ ಕಾಲೋನಿಯಲ್ಲಿರುವ ಆರ್.ಹೆಚ್.ಬೃಂದಾವನದಲ್ಲಿ ನೆರವೇರಿತು.

**ದುಃಖತಪ್ತ ಕುಟುಂಬ ವರ್ಗ**

ಸಂತಾಪ ಸೂಚಿಸುವವರು : ಹೊಳೆಯಾಚೆ ಹೆಚ್.ಎನ್. ಮಂಜುನಾಥ್ ಕುಟುಂಬ ವರ್ಗ, ನಿಟುವಳ್ಳಿ, ದಾನಪ್ಪ ದಲ್ಲಾಳಿ ಅಂಗಡಿ ಬೆಳವನೂರು ಪ್ರಭಣ್ಣ, ಬಸವಾನಂದ ದಲ್ಲಾಳಿ ಅಂಗಡಿ ಬಸಣ್ಣ ಹಾಗೂ ಅಪಾರ ಬಂಧು- ಮಿತ್ರರು.

# ಸೋಂಕಿತರಿಗೆ ಉಚಿತ ಆಂಬ್ಯುಲೆನ್ಸ್ ಸೇವೆ



**ಹರಪನಹಳ್ಳಿ**

ಹರಪನಹಳ್ಳಿ, ಮೇ 11 - ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಅವೈಜ್ಞಾನಿಕ ನಿರ್ಧಾರಗಳಿಂದ ಜನ ಸಾಮಾನ್ಯರು ಸಂಕಷ್ಟಕ್ಕೊಳಗಾಗಿದ್ದು, ಜನರ ನೋವಿಗೆ ಸ್ಪಂದಿಸದೇ ಅವರನ್ನು ಕಷ್ಟಗಳಿಗೆ ನೂಕಿದ್ದಾರೆ. ರಾಜ್ಯ ಸರ್ಕಾರ ಮಾಡದ ಕೆಲಸವನ್ನು ಕಾಂಗ್ರೆಸ್ ಪಕ್ಷ ಕಾರ್ಯಕರ್ತರೊಡನೆ ಸೇರಿ ಹರಪನಹಳ್ಳಿ ಕ್ಷೇತ್ರದ ಜನರಿಗೆ ಆಂಬ್ಯುಲೆನ್ಸ್ ಸೇವೆ ಹಾಗೂ ಕೋವಿಡ್ ಸಹಾಯವಾಣಿ ಕೇಂದ್ರವನ್ನು ತೆರೆಯಲಾಗಿದೆ ಎಂದು ಕೆ.ಪಿ.ಸಿ.ಸಿ. ಮಾಧ್ಯಮ ವಿಶ್ಲೇಷಕರಾದ ಎಂ.ಪಿ.ವೀಣಾ ಮಹಾಂತೇಶ್ ಹೇಳಿದರು.

ಪಟ್ಟಣದ ಆಚಾರ್ಯ ಬಡಾವಣೆಯ ತಮ್ಮ ನಿವಾಸದಲ್ಲಿ ಉಚಿತ ಆಂಬ್ಯುಲೆನ್ಸ್ ಸೇವೆ ಹಾಗೂ ಕೋವಿಡ್ ರೋಗಿಗಳ ಸಹಾಯವಾಣಿಗೆ ಚಾಲನೆ ನೀಡಿ ಮಾತನಾಡಿದ ಅವರು, ಕೇಂದ್ರ ಮತ್ತು ಸರ್ಕಾರಗಳ ತಪ್ಪು ನಿರ್ಧಾರದಿಂದ ಯುವಜನತೆಗೆ ಆದ್ಯತೆಯ ಮೇರೆಗೆ ಕೋವಿಡ್ ಲಸಿಕೆ ನೀಡದೇ 45 ವರ್ಷ ಮೇಲ್ಪಟ್ಟವರಿಗೆ ನೀಡಿದರ ಪರಿಣಾಮ ಪ್ರಸ್ತುತ ವಯಸ್ಸಾದವರೇ ಯುವಕರನ್ನು ಚಿಕಿತ್ಸೆಗಾಗಿ ಕರೆತರುವಂತಹ ಸ್ಥಿತಿ ನಿರ್ಮಾಣವಾಗಿರುವುದು ಶೋಚನೀಯ.

ಕೋವಿಡ್ ನಿಯಂತ್ರಿಸಲು ಸರ್ಕಾರದ ಮೇಲೆ ದೋ ಷಾ ರೋ ಪ ಣೆ ಮಾಡುವುದಕ್ಕಿಂತ ನಾವು ಕೂಡ ಕೈಲಾದ ಮಟ್ಟಿಗೆ ಸಹಾಯ ಮಾಡುವ ನಿಟ್ಟಿನಲ್ಲಿ ಕೋವಿಡ್ ಲಸಿಕೆ ಹಾಗೂ ತಜ್ಞ ವೈದ್ಯರ ಶಿಫಾರಸ್ಸಿನ ಮೇರೆಗೆ ಸೋಂಕಿತರಿಗೆ ಚಿಕಿತ್ಸೆ ನೀಡಲು ಸಹಕಾರಿಯಾಗಲು ತಾಲ್ಲೂಕಿನಾದ್ಯಂತ ಉಚಿತ ಆಂಬ್ಯುಲೆನ್ಸ್ ಸೇವೆಗಾಗಿ 080-47187272 ಸಂಪರ್ಕಿಸಿ ಎಂದು ಮನವಿ ಮಾಡಿದರು.

ಕೆ.ಪಿ.ಸಿ.ಸಿ. ವೈದ್ಯಕೀಯ ಘಟಕದ ಉಪಾಧ್ಯಕ್ಷ ಡಾ|| ಮಹಾಂತೇಶ್ ಚರಂತಿಮಠ್ ಮಾತನಾಡಿ, ಉಚಿತ ಆಂಬ್ಯುಲೆನ್ಸ್ ಹಾಗೂ ಕೋವಿಡ್ ರೋಗಿಗಳಿಗೆ 24x7 ನಿರಂತರವಾಗಿ ಸಹಾಯವಾಣಿ ತೆರೆಯಲಾಗಿದ್ದು ಜನರು ಇದರ ಸದುಪಯೋಗ ಪಡೆದುಕೊಳ್ಳಲು ಮನವಿ ಮಾಡಿದರು.

ಈ ವೇಳೆ ಚಿಗಟೇರಿ ಬ್ಲಾಕ್ ಯುವ ಕಾಂಗ್ರೆಸ್ ಅಧ್ಯಕ್ಷ ಶಿವರಾಜ್ ಹರಿಯಮ್ಮನಹಳ್ಳಿ, ನ್ಯಾಯವಾದಿ ಸಿದ್ದಲಿಂಗನಗೌಡ, ಯುವ ಕಾಂಗ್ರೆಸ್ ಕಾರ್ಯದರ್ಶಿ ಮಂಜುನಾಥ, ಉಪಾಧ್ಯಕ್ಷ ದಾದಾಪೀರ್, ಮುಖಂಡರಾದ ತಥಾಗತ್, ದೇವರ ತಿಮ್ಮಲಾಪುರದ ನಾಗರಾಜ ಸೇರಿದಂತೆ, ಇತರರು ಇದ್ದರು.

## ಶ್ರೇಷ್ಠ ನರ್ಸಿಂಗ್ ಕಾಯಕ

(ಇಂದು ವಿಶ್ವ ನರ್ಸ್‌ಗಳ ದಿನಾಚರಣೆ)
ಬೆಲೆಕಟ್ಟಲಿಕ್ಕಾಗದು ನರ್ಸಿಂಗ್ ಕಾಯಕ
ಪ್ರಾಣ ಉಳಿಸುವರು ಶುಶ್ರೂಷೆ ಮೂಲಕ,
ಹಗಲಿರುಳೆನ್ನದೆ ಉಪಚಾರ ಮಾಡುತ
ಸೇವೆಗೈವರು ವೈದ್ಯರ ಆದೇಶ ಪಾಲಿಸುತ.

ಬಂಧುವೋ, ವೈರಿಯೋ, ಭೇದವ ಎಣಿಸದೆ
ಧನಿಕರೋ, ಬಡವರೋ ತರತಮ ಎಣಿಸದೆ,
ಹೆಣ್ಣೋ, ಗಂಡೋ, ಮಕ್ಕಳು, ಮುದುಕರು
ನಮಗೆಲ್ಲರೊಂದೇ ಎಂಬರು ದಾದಿಯರು.

ಮುಗುಳು ನಗೆಯಲಿ ಮೃದು ನುಡಿಯಾಡುತ
ರೋಗಿಯ ಮನಸಿನ ಭಯ ನಿವಾರಿಸುತ,
ಕಾಲಕಾಲಕೆ ಮದ್ದುಗಳ ನೀಡುತ
ನಿಗಾ ವಹಿಸುವರು ಗುಣವಾಗುವ ತನಕ.

ವೈದ್ಯರು 'ನಾರಾಯಣ ಹರಿ' ಎಂದಾದರೆ
ನಿಜ 'ದೇವೀ ಸ್ವರೂಪರು' ಶುಶ್ರೂಷಕಿಯರೇ
ನಿಮ್ಮ ವೃತ್ತಿಗೆ, ನಿಮ್ಮ ಸೇವೆಗೆ, ನಿಮ್ಮ ತಾಳ್ಮೆಗೆ
ಕೃತಜ್ಞರು ನಾವು, ಋಣ ತೀರಿಸುವುದು ಹೇಗೆ ?

- **ಹೆಚ್.ಬಿ.ಮಂಜುನಾಥ್**, ಹಿರಿಯ ಪತ್ರಕರ್ತ

## ಉಕ್ಕಿನ ಮಹಿಳೆ ಗೌರಿ ಅಮ್ಮ ನಿಧನ

**(1ನೇ ಪುಟದಿಂದ)** ಮಹಿಳಾ ವಿಷಯಗಳ ಪರವಾಗಿ ಸಮರ್ಥವಾಗಿ ನಿಲ್ಲುತ್ತಿದ್ದರು. ದಕ್ಷ ಆಡಳಿತದಿಂದಾಗಿ ಅವರು ಉಕ್ಕಿನ ಮಹಿಳೆ ಎಂಬ ಹೆಸರು ಗಳಿಸಿದ್ದರು.

ಕಂದಾಯ ಸಚಿವೆಯಾಗಿದ್ದ ಅವರು, ಭೂ ಹಿಡುವಳಿ ಮಿತಿಗಾಗಿ ಕಾನೂನು ರೂಪಿಸಿದ್ದರು. ಇದರಿಂದಾಗಿ ಜಮೀನು ರಹಿತ ಕೃಷಿಕರು ಹೆಚ್ಚುವರಿ ಜಮೀನು ಪಡೆಯಲು ಸಾಧ್ಯವಾಗಿತ್ತು.

# ನಮ್ಮ ಆರೋಗ್ಯ ನಮ್ಮ ಕೈಯ್ಯಲ್ಲಿದೆ

## ಹನಗವಾಡಿ ಗ್ರಾ.ಪಂ ಅಧ್ಯಕ್ಷೆ ಸವಿತಾ ಶೇಖರಪ್ಪ ಸಲಹೆ




ಹರಿಹರ, ಮೇ 11- ರಾಜ್ಯದಲ್ಲಿ ಕೋವಿಡ್ ತನ್ನ ಆರ್ಭಟ ಮುಂದುವರೆಸಿದೆ. ಸರ್ಕಾರದ ಆದೇಶದಂತೆ ಎರಡನೇ ಬಾರಿಗೆ ಕಟ್ಟುನಿಟ್ಟಿನ ಲಾಕ್‌ಡೌನ್ ಜಾರಿ ಮಾಡಿದ್ದು, ಗ್ರಾಮದಲ್ಲಿನ ಜನರು ಅನಾವಶ್ಯಕವಾಗಿ ಸುತ್ತಾಡದೆ ಮನೆಯಲ್ಲಿಯೇ ಇರಬೇಕು. ನಮ್ಮ ಆರೋಗ್ಯ ನಮ್ಮ ಕೈಯ್ಯಲ್ಲಿದೆ ಎಂದು ಹನಗವಾಡಿ ಗ್ರಾ.ಪಂ. ಅಧ್ಯಕ್ಷೆ ಸವಿತಾ ಶೇಖರಪ್ಪ ಸಲಹೆ ನೀಡಿದರು.

ತಾಲ್ಲೂಕಿನ ಹನಗವಾಡಿ ಗ್ರಾಮ ಪಂಚಾಯ್ತಿ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ ಕೋವಿಡ್ ಜಾಗೃತಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಕೋವಿಡ್ 2ನೇ ಅಲೆಗೆ ನಮ್ಮ ಊರಿನಲ್ಲಿ ಇಬ್ಬರು ಯುವಕರನ್ನು ಕಳೆದುಕೊಂಡಿದ್ದೇವೆ. ಇನ್ನು ಮುಂದಾದರು ನಾವು ನಮ್ಮ ಗ್ರಾಮದ ಜನರನ್ನು ಬದುಕಿಸಿಕೊಳ್ಳಲು ಹಾಗೂ ನಮ್ಮ ಆರೋಗ್ಯವನ್ನು ನಾವು ಕಾಪಾಡಿಕೊಳ್ಳಲು ಮನೆಯಲ್ಲಿಯೇ ಇರೋಣ ಎಂದು ಮಾರ್ಗದರ್ಶನ ನೀಡಿದರು.

ತಾಲ್ಲೂಕು ಆರೋಗ್ಯಾಧಿಕಾರಿ ಡಾ. ಚಂದ್ರ ಮೋಹನ್ ಮಾತನಾಡಿ, ತಾಲ್ಲೂಕಿನಲ್ಲಿ ಕೊರೊನಾ ವೈರಸ್ ಲಕ್ಷಣಗಳು ಕಂಡು ಬಂದಿಲ್ಲ ಎಂದು ತಿಳಿಸಿದರು.

ತಾ.ಪಂ. ಇಒ ಗಂಗಾಧರನ್ ಮಾತನಾಡಿ, ಈಗಾಗಲೇ ಗ್ರಾಮಾಂತರ ಪ್ರದೇಶಗಳಲ್ಲಿಯೂ ಕೊರೊನಾ ಸೋಂಕಿತರ ಸಂಖ್ಯೆ ಹೆಚ್ಚಳವಾಗಿದ್ದು, ಮುಂದಿನ ದಿನಗಳಲ್ಲಿ ಆಸ್ಪತ್ರೆಗಳಲ್ಲಿ ಹಾಸಿಗೆಗಳ ಕೊರತೆ ಉಂಟಾಗಬಹುದು. ಹೆಚ್ಚುವರಿ ವಾರ್ಡ್‌ಗಳ ಜೊತೆಗೆ ಸೋಂಕಿತರು ಹಾಗೂ ಇತರೆ ರೋಗ ಲಕ್ಷಣಗಳುಳ್ಳವರನ್ನು ಎಲ್ಲಿಗೆ ಕಳುಹಿಸಬೇಕು ಎಂಬ ಬಗ್ಗೆ ಒಂದು ನಕ್ಷೆ ತಯಾರಾಗಬೇಕು. ಕೋವಿಡ್ ಆರೈಕೆ ಕೇಂದ್ರಗಳನ್ನು ಗುರುತಿಸಿ ಸಿದ್ಧಪಡಿಸಿಕೊಳ್ಳಬೇಕು. ಇಂತಹ ಕೇಂದ್ರಗಳಿಗೆ ದಾಖಲಾಗುವವರಿಗೆ ವ್ಯವಸ್ಥೆ ಸರಿಯಾಗಿ ಸಿಗುವಂತೆ ಮಾಡಬೇಕು ಎಂದರು.

ಗ್ರಾಮಾಂತರ ಪೊಲೀಸ್ ಠಾಣೆಯ ಪಿಎಸ್‌ಐ ಡಿ. ರವಿಕುಮಾರ್ ಮಾತನಾಡಿ, ನಿಮ್ಮ ವಾಹನಗಳನ್ನು ಪೊಲೀಸರು ಸೀಜ್ ಮಾಡಿದರೆ ನಿಮ್ಮ ಗಡಿಯನ್ನು ನೀವು ಮರೆಯ ಬೇಕಾಗುತ್ತದೆ. ಜೊತೆಯಲ್ಲಿ ನಿಮ್ಮ ಆರೋಗ್ಯವನ್ನು ನೀವೇ ಕಾಪಾಡಿಕೊಳ್ಳಬೇಕು ಎಂದು ತಿಳಿ ಹೇಳಿದರು.

ಸಭೆಯಲ್ಲಿ ಗ್ರಾ.ಪಂ. ಉಪಾಧ್ಯಕ್ಷ ರೇವಣಸಿದ್ದಪ್ಪ, ಸದಸ್ಯರಾದ ದ್ರಾಕ್ಷಾಯಣಮ್ಮ, ಸುಜಾತ, ಹನುಮಂತಪ್ಪ, ಚಂದ್ರಗೌಡ, ಶಾರದಮ್ಮ ತಿಪ್ಪೇಶ್, ಕವಿತಾ, ಲಕ್ಷ್ಮಮ್ಮ ಪುಷ್ಪಾ, ಡಿ.ಎಸ್. ಹನುಮಂತಪ್ಪ, ಪ್ರವೀಣ್ ಹನಗ ವಾಡಿ, ಮುಖಂಡರಾದ ಕೆ. ಶೇಖರಪ್ಪ, ಡಿ. ಗಿರೀಶ್, ಹನುಮಂತಪ್ಪ ರಾಟಿ, ನಾಗರಾಜ್, ವಾಮಪ್ಪ, ಗ್ರಾ.ಪಂ. ಕಾರ್ಯದರ್ಶಿ ರಾಮಪ್ಪ ಮತ್ತಿತರರಿದ್ದರು.


**ಬಿಲ್ಡಿಂಗ್ ಬಾಡಿಗೆಗಿದೆ**
ಚಾಮರಾಜಪೇಟೆ ಸರ್ಕಲ್ ಹತ್ತಿರ, ಕಲ್ಲೇಶ್ವರ ಕಿರಾಣಿ ಅಂಗಡಿ ಮೇಲ್ಭಾಗದಲ್ಲಿ 3 ಮಹಡಿ ಇರುವ 10,000 ಚದುರ ಅಡಿ ವಿಶಾಲವಾದ ಜಾಗ ಇರುವ ಬಿಲ್ಡಿಂಗ್ ಬಾಡಿಗೆಗಿದೆ. ಸಂಪರ್ಕಿಸಿ :
ಮೊ. : 98453 17181

ಜೈ ಶ್ರೀಮನ್ನಾರಾಯಣ
ವಿಕಾಸ ತರಂಗಿಣಿ, ದಾವಣಗೆರೆ
ಸ್ಫೂರ್ತಿ ಸೇವಾ ಟ್ರಸ್ಟ್
**ಪ್ರಸಾದ ದಾಸೋಹ**
ಇಂದಿನ ಪ್ರಸಾದ ವಿತರಕರು
ಜಿ.ಎನ್. ಸೋಮಶೇಖರಪ್ಪ ಚಾರ್ಟೆರ್ಡ್ ಅಕೌಂಟೆಂಟ್, ದಾವಣಗೆರೆ. ಮತ್ತು ಕುಟುಂಬ ವರ್ಗದವರ ಸೇವಾರ್ಥ
ಸ್ಥಳ : ಸಿ.ಜಿ. ಆಸ್ಪತ್ರೆ ಮುಂಭಾಗ, 12 ಗಂಟೆಗೆ ಮತ್ತು ಹೆರಿಗೆ ಆಸ್ಪತ್ರೆ ಮುಂಭಾಗ, 12.30ಕ್ಕೆ

**ಮನೆ ಮಾರಾಟಕ್ಕಿದೆ**
ಮಾವಿನತೋಪು ಹಾಸ್ಪಿಟಲ್ ಹಿಂಭಾಗ, ಕುವೆಂಪು ಬಡಾವಣೆಯಲ್ಲಿ 40×60 North ಮೂರು ಬೆಡ್ ರೂಂ ಮನೆ, ಮೂರು ಬೆಡ್ ರೂಮಿಗೆ ಅಟ್ಯಾಚ್ ಇದೆ. ಇಂಡಿಪೆಂಡೆಂಟ್ ಹೌಸ್
ಐನಳ್ಳಿ ಚನ್ನಬಸಪ್ಪ, ಏಜೆಂಟ್
99166 12110

**ಬೇಕಾಗಿದ್ದಾರೆ**
SBI Life ಗೆ 10 ಜನ ಇನ್ಸೂರೆನ್ಸ್ ಏಜೆಂಟ್ ಬೇಕಾಗಿದ್ದಾರೆ. ಎಸ್.ಎಸ್.ಎಲ್.ಸಿ / ಪಿಯುಸಿ ಮಾಡಿರುವ 30 ವರ್ಷ ಮೇಲ್ಪಟ್ಟವರು ಪಾರ್ಟ್ ಟೈಮ್ ಕೆಲಸ ಮಾಡಿ ತಿಂಗಳಿಗೆ 30 ಸಾವಿರ ಸಂಪಾದಿಸಬಹುದು.
99009 19091

**ಅಗರಬತ್ತಿ ಮಾರಾಟ**
ಗಣೇಶ ಅಗರಬತ್ತಿ ವರ್ಕ್ಸ್
ತಯಾರಕರಿಂದ ನೇರ ಮಾರಾಟ
ರಾ ಬತ್ತಿ ಸೆಂಟೆಡ್ ಬತ್ತಿ, ಲೂಸ್ ಬತ್ತಿ, ಪ್ಯಾಕಿಂಗ್‌ಗಳಲ್ಲಿ ರಿಯಾಯಿತಿ ದರದಲ್ಲಿ ವ್ಯಾಪಾರಸ್ಥರಿಗೆ, ಡೋರ್ ಡಿಲೆವರಿ
ಪ್ರೈವೇಟ್ ಬಸ್‌ಸ್ಟ್ಯಾಂಡ್ ಸ್ಟಾಲ್ ನಂ. 5
ಫೋನ್. 89517 16682

**ಮನೆ ಬಾಡಿಗೆಗೆ ಇದೆ**
ದಾವಣಗೆರೆ ಎಲ್.ಐ.ಸಿ. ಕಾಲೋನಿ, 4ನೇ ಮುಖ್ಯ ರಸ್ತೆ, ನೂತನ ಕಾಲೇಜು ಹಿಂಭಾಗ, ಪೂರ್ವದಿಕ್ಕಿನ, ಸಂಪೂರ್ಣ ವಾಸ್ತುವುಳ್ಳ, 3 ಬೆಡ್‌ರೂಂ ಮನೆ ಮುನ್ಸಿಪಲ್ ಹಾಗೂ ಬೋರ್ ನೀರಿನ ಸೌಕರ್ಯವಿದ್ದು ಮೊದಲನೇ ಮಹಡಿಯಲ್ಲಿ ಬಾಡಿಗೆಗೆ ಇದೆ.
93410 12022

**ಗೋಲ್ಡನ್ ಲ್ಯಾಂಪ್ ಹೋಂ ಕೇರ್ ಸರ್ವೀಸ್**
ನಮ್ಮಲ್ಲಿ ವಯೋವೃದ್ಧರನ್ನು ಹಾಗೂ ರೋಗಿಗಳನ್ನು ನೋಡಿಕೊಳ್ಳಲು ಹೋಂ (ನರ್ಸ್) ಮತ್ತು ಆಯಾಗಳನ್ನು ಕಳುಹಿಸುತ್ತೇವೆ ಹಾಗೂ ಕೋವಿಡ್ ಪೇಷೆಂಟ್‌ಗಳನ್ನು ನೋಡಿಕೊಳ್ಳಲಾಗುವುದು.
ಷರತ್ತುಗಳು ಅನ್ವಯ, ತಕ್ಷಣ ಸಂಪರ್ಕಿಸಿ
89047 35301, 98447 17618

**ಆಯುಷ್ ಚಾರಿಟೇಬಲ್ ಟ್ರಸ್ಟ್**
**ಆಯುಷ್ ಆರೈಕೆ ಕೇಂದ್ರ**
ನಮ್ಮಲ್ಲಿ ವೃದ್ಧರು, ಅಂಗವಿಕಲರು, ಪಾರ್ಶ್ವವಾಯು ಪೀಡಿತರು ಹಾಗೂ ರೋಗಿಗಳ ಆರೈಕೆ ಮಾಡಲಾಗುವುದು.
ವಿದ್ಯಾನಗರ, ದಾವಣಗೆರೆ.
97315 11795

**ಮನೆ ಬಾಡಿಗೆಗೆ/ಲೀಸ್ ಗಿದೆ**
ಸರಸ್ವತಿ ಬಡಾವಣೆ, ಜಯನಗರ, ಶಿವಕುಮಾರಸ್ವಾಮಿ ಬಡಾವಣೆ, ಶಕ್ತಿ ನಗರ, ಆಂಜನೇಯ ಬಡಾವಣೆ, ಸಿದ್ದವೀರಪ್ಪ ಬಡಾವಣೆಯಲ್ಲಿ ಮನೆಗಳು ಬಾಡಿಗೆಗೆ/ಲೀಸ್ ಗೆ ಇವೆ. ಶಿವಕುಮಾರಸ್ವಾಮಿ ಬಡಾವಣೆಯಲ್ಲಿ ಮನೆಗಳು ಬಾಡಿಗೆಗಿವೆ.
99726-75759

**ಪ್ರವೇಶ ಪ್ರಕಟಣೆ**
ಕರೆಸ್ಪಾಂಡೆನ್ಸ್/ ರೆಗ್ಯೂಲರ್
SSLC, PUC, BA, BCom, BSc, MA, MCom, MSc, MBA, All PG & Diploma Courses
S.S. Global Institute for Higher Education, Davanagere.
63619 00533, 72593 59861

**ಸಾಲಗಳಿಗೆ ಸಂಪರ್ಕಿಸಿ**
(ಬಡ್ಡಿ ದರ ವಾರ್ಷಿಕ 7% ರಿಂದ ಪ್ರಾರಂಭ)
ಮನೆ ಕಟ್ಟಲು, ಮನೆ ಖರೀದಿ, ಸೈಟ್ ಖರೀದಿ, ಕಟ್ಟಿರುವ ಮನೆಗೆ ಸಾಲ, ಬೇರೆ ಬ್ಯಾಂಕ್‌ನಲ್ಲಿ ತೆಗೆದುಕೊಂಡಿರುವ ಸಾಲ ವರ್ಗಾವಣೆ ಮತ್ತು ಅಧಿಕ ಸಾಲಕ್ಕಾಗಿ ಸಂಪರ್ಕಿಸಿ.
(ಸಂಬಳ ಮತ್ತು ವ್ಯವಹಾರದಾರರಿಗೆ ಮಾತ್ರ)
73385 80345

**ಭೂಮಿಕಾ ಮ್ಯಾಟ್ರಿಮೊನಿ**
ಲಿಂಗಾಯಿತ ವಧು-ವರರ ಕೇಂದ್ರ
H.O : Near coffee day, Nutana collage road, Vidyanagara 2nd main, Davangere
77603 16576
90080 55813


# ಬೆಳ್ಳೂಡಿ ಹರ್ಷ ನಿಧನ



ದಾವಣಗೆರೆ ಸಿಟಿ ಲಾಯರ್ ರೋಡ್ ನಿವಾಸಿ,
ದಿ|| ಬಿ.ಎಂ. ವೀರೇಶ್ ಅವರ ಮೊದಲನೆಯ ಪುತ್ರರಾದ
**ಶ್ರೀ ಬಿ.ವಿ. ಹರ್ಷ** ಅವರು ದಿನಾಂಕ 11.05.2021ನೇ ಮಂಗಳವಾರ
ಸಂಜೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ.
ಮೃತರಿಗೆ 43 ವರ್ಷ ವಯಸ್ಸಾಗಿತ್ತು. ತಾಯಿ, ಪತ್ನಿ, ಓರ್ವ ಪುತ್ರಿ, ಓರ್ವ ಪುತ್ರ,
ಸಹೋದರ ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು
ದಿನಾಂಕ 11.05.2021ರ ಮಂಗಳವಾರ ಸಂಜೆ 7 ಗಂಟೆಗೆ
ಮುದಹದಡಿಯ ಮೃತರ ಸ್ವಂತ ಜಮೀನಿನಲ್ಲಿ ನೆರವೇರಿತು.

**ದುಃಖತಪ್ತ ಕುಟುಂಬ ವರ್ಗ**
ತಾಯಿ : **ಶ್ರೀಮತಿ ಜಯಶ್ರೀ ವೀರೇಶ್**, ಸಹೋದರ : **ನವೀನ್ ಬಿ.ವಿ.**
ಪತ್ನಿ : **ಶ್ರೀಮತಿ ದೇವಿರಮ್ಮ**, ಮಕ್ಕಳು : **ಕು|| ಪೂರ್ವಿ, ಕು|| ಪವನ್**
**ಯಜಮಾನ್ ಬೆಳ್ಳೂಡಿ ವಂಶಸ್ಥರು.**

# ಕೂಲಿ ಕಾರ್ಮಿಕರಿಗೆ ಸಹಾಯಧನ ಘೋಷಿಸಲು ಎಐಟಿಯುಸಿ ಒತ್ತಾಯ

**ಜಗಳೂರು**

ಜಗಳೂರು, ಮೇ 11- ಲಾಕ್‌ಡೌನ್ ಅವಧಿಯನ್ನು ಮೇ 24 ರವರೆಗೆ ವಿಸ್ತರಿಸಿದ್ದು, ನಗರ ಪ್ರದೇಶದಿಂದ ಗ್ರಾಮಾಂತರ ಪ್ರದೇಶಗಳಿಗೆ ಆಗಮಿಸಿರುವ ಬಡ ಕೂಲಿ ಕಾರ್ಮಿಕರಿಗೆ ನರೇಗಾ ಯೋಜನೆ ವರದಾನವಾಗಿತ್ತು.

ಕೋವಿಡ್ ವಿಪತ್ತು ಎಂದು ಘೋಷಿಸಿ ಎಂಐಎಸ್‌ನಲ್ಲಿ ಇಂದಿನವರೆಗೂ ಎಲ್ಲಾ ಕಾಮಗಾರಿಗಳ ಎನ್‌ಎಂಆರ್‌ಗಳನ್ನು ಮುಚ್ಚಿ, ನವೀಕರಿಸಿ ಹಾಗೂ ತಪ್ಪದೇ ಬಾಕಿ ಹಣ ಪಾವತಿಸಿ, ಮೇ 25 ರವರೆಗೆ ನರೇಗಾ ಉದ್ಯೋಗಖಾತ್ರಿ ಕಾಮಗಾರಿಗೆ ಅನುಮತಿಸದೆ, ತಾತ್ಕಾಲಿಕವಾಗಿ ನರೇಗಾ ಕಾಮಗಾರಿ ಸ್ಥಗಿತಗೊಳಿಸಲು ಸರ್ಕಾರ ಆದೇಶಿಸಿರುವುದು ಖಂಡನೀಯ ಎಂದು ಎಐಟಿಯುಸಿ ತಾಲ್ಲೂಕು ಪ್ರಧಾನ ಕಾರ್ಯದರ್ಶಿ ಮಾದಿಹಳ್ಳಿ ಮಂಜುನಾಥ್ ತಿಳಿಸಿದ್ದಾರೆ.

ಗ್ರಾಮೀಣ ಭಾಗದಲ್ಲಿನ ಬಡ ಕೂಲಿ ಕಾರ್ಮಿಕರನ್ನು ಹಸಿವಿನ ಕೂಪಕ್ಕೆ ತಳ್ಳುವಲ್ಲಿ ಆಡಳಿತ ಸರ್ಕಾರ ಸಾಕ್ಷಿಯಾಗಿದೆ. ಕೂಡಲೇ ಪರ್ಯಾಯವಾಗಿ ಕೂಲಿ ಕಾರ್ಮಿಕರಿಗೆ ಆರ್ಥಿಕ ಸಂಕಷ್ಟ ಎದುರಾಗದಂತೆ ಹಾಗೂ ಹಸಿವು ನೀಗಿಸಲು ಕೂಲಿ ಕಾರ್ಮಿಕರಿಗೆ ಸಹಾಯಧನ ಹಾಗೂ ಬಿಪಿಎಲ್ ಕಾರ್ಡ್‌ದಾರರಿಗೆ 10 ಕೆ.ಜಿ.ಗೂ ಅಧಿಕ ಪ್ರಮಾಣದ ಅಕ್ಕಿ ವಿತರಣೆ ಸೇರಿದಂತೆ ಆಹಾರ ಭದ್ರತೆ ಒದಗಿಸಬೇಕು ಎಂದು ಎಐಟಿಯುಸಿ ತಾಲ್ಲೂಕು ಪ್ರಧಾನ ಕಾರ್ಯದರ್ಶಿ ಮಾದಿಹಳ್ಳಿ ಮಂಜುನಾಥ್ ಮನವಿ ಮಾಡಿದ್ದಾರೆ.

# ಹರಿಹರ : 800 ಹಬೆ ಯಂತ್ರ ವಿತರಣೆ



ಮಲೇಬೆನ್ನೂರು, ಮೇ 11 - ಇಲ್ಲಿನ ಪೊಲೀಸ್ ಠಾಣೆಯ ಪಿಎಸ್‌ಐ ವೀರಬಸಪ್ಪ ಸೇರಿದಂತೆ 38 ಜನ ಪೊಲೀಸ್ ಸಿಬ್ಬಂದಿಗಳಿಗೆ ಸೋಮವಾರ ಉದ್ಯಮಿ ನಂದಿಗಾವಿ ಶ್ರೀನಿವಾಸ್ ಅವರು ಹಬೆ ತೆಗೆದುಕೊಳ್ಳುವ ಯಂತ್ರ ವಿತರಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಶ್ರೀನಿವಾಸ್ ಅವರು, ಕಳೆದ ವರ್ಷ ಕೊರೊನಾ ವೇಳೆ ಮಾಸ್ಕ್, ಸ್ಯಾನಿಟೈಸರ್ ಜೊತೆಗೆ ರೋಗ ನಿರೋಧಕ ಶಕ್ತಿ ಹೆಚ್ಚಿಸುವ ಹೆಲ್ತ್ ಕಿಟ್‌ಗಳನ್ನು ಹರಿಹರ ತಾಲ್ಲೂಕಿನಲ್ಲಿರುವ ಎಲ್ಲಾ ಕೊರೊನಾ ವಾರಿಯರ್ಸ್‌ಗಳಿಗೆ ನೀಡಿದ್ದೆ. ಈಗ ಹಬೆ ತೆಗೆದುಕೊಳ್ಳುವ ಯಂತ್ರಗಳನ್ನು ನೀಡುತ್ತಿದ್ದೇನೆ. ಪೌರ ಕಾರ್ಮಿಕರು, ಪೊಲೀಸರು, ಪತ್ರಕರ್ತರು, ವೈದ್ಯರು, ಆರೋಗ್ಯ ಇಲಾಖೆ ಸಿಬ್ಬಂದಿ, ಆಶಾ ಕಾರ್ಯಕರ್ತರಿಗೆ ಈ ಯಂತ್ರಗಳನ್ನು ವಿತರಿಸಲು ಇಂದು ಚಾಲನೆ ನೀಡಿದ್ದು 4-5 ದಿನದೊಳಗೆ ಎಲ್ಲರಿಗೂ ತಲುಪಿಸುತ್ತೇನೆಂದು ಶ್ರೀನಿವಾಸ್ ತಿಳಿಸಿದರು.

ನಂದಿಗಾವಿ ಶ್ರೀನಿವಾಸ್ ಅಭಿಮಾನಿ ಬಳಗದ ಬಸವರಾಜ್ ದೊಡ್ಮನಿ, ಮುದೇನೂರು ಭರತ್, ಹರಳಹಳ್ಳಿ ಮಂಜು, ಹರಿಹರದ ಮಂಜು ಮತ್ತಿತರರು ಈ ವೇಳೆ ಹಾಜರಿದ್ದರು.

**ಹಾಲು ವಿತರಣೆ:** ಪಟ್ಟಣದ ಕಡು ಬಡವರಿಗೆ ಮಂಗಳವಾರ ಬೆಳಗ್ಗೆ ನಂದಿಗಾವಿ ಶ್ರೀನಿವಾಸ್ ಅಭಿಮಾನಿ ಬಳಗದಿಂದ ಹಾಲು ವಿತರಣೆ ಮಾಡಲಾಗುವುದು ಎಂದು ಬಸವರಾಜ್ ದೊಡ್ಮನಿ ತಿಳಿಸಿದರು.

## ನಗರದಲ್ಲಿ ಸರಳ ಬಸವ ಜಯಂತಿ

ದಾವಣಗೆರೆ, ಮೇ 11- ಬಸವ ಜಯಂತಿ ಪ್ರಾರಂಭಿಸಿದ ಐತಿಹಾಸಿಕ ನಗರದ ಶ್ರೀ ವಿರಕ್ತ ಮಠದಲ್ಲಿ ಇದೇ ದಿನಾಂಕ 14ರ ಶುಕ್ರವಾರ ಬೆಳಿಗ್ಗೆ 10.30 ಕ್ಕೆ ವಿಶ್ವಗುರು ಬಸವಣ್ಣನವರ ಜಯಂತಿಯನ್ನು ಸರಳವಾಗಿ ಆಚರಿಸಲಾಗುತ್ತದೆ ಎಂದು ಶ್ರೀ ಬಸವಪ್ರಭು ಸ್ವಾಮೀಜಿ ತಿಳಿಸಿದ್ದಾರೆ.

## ನೆರವಿಗೆ ಜಾನಪದ ಕಲಾವಿದ ಉಮೇಶ್ ಮೊರೆ

ದಾವಣಗೆರೆ, ಮೇ 11- ಮಹಾಮಾರಿ ಕೊರೊನಾ ಇಡೀ ದೇಶವನ್ನೇ ಹಾಳು ಮಾಡುತ್ತಿದ್ದು, ಬಡ ಕಲಾವಿದರ ಗೋಳು ಕೇಳುವವರಿಲ್ಲವಾಗಿದೆ ಎಂದು ಜಾನಪದ ಕಲಾವಿದ ಉಮೇಶ್ ನಾಯ್ಕ್ ತಮ್ಮ ಅಳಲು ತೋಡಿಕೊಂಡಿದ್ದಾರೆ.

ತಮಗೆ ಬಂದಿರುವ ಜಿಲ್ಲೆ, ರಾಜ್ಯ ಹಾಗೂ ಹಲವು ಸಂಘ-ಸಂಸ್ಥೆಗಳು ನೀಡಿರುವ ಪ್ರಶಸ್ತಿ, ಗೌರವಗಳನ್ನು ತನ್ನ ಗ್ರಾಮ ಚಿನ್ನಸಮುದ್ರದಲ್ಲಿ ಸಾರ್ವಜನಿಕವಾಗಿ ಇಟ್ಟು ನೋವನ್ನು ಹಂಚಿಕೊಂಡಿದ್ದಾರೆ. ಜಿಲ್ಲಾಡಳಿತ ಕಲಾವಿದರಿಗೆ ಸಹಾಯ ಮಾಡಬೇಕು. ಜಾನಪದ ಅಕಾಡೆಮಿ, ಕಸಾಪ ಮತ್ತು ಆಕಾಶವಾಣಿ ಚಿತ್ರದುರ್ಗ ಮತ್ತು ಇತರೆಡೆಗಳಲ್ಲಿ ಕಾರ್ಯಕ್ರಮ ನೀಡಿ, ಕಲಾವಿದರಿಗೆ ನೆರವು ನೀಡುವಂತೆ ಕೋರಲಾಗಿದೆ.

## ಹರಿಹರ : ಆಸ್ತಿ ತೆರಿಗೆ ರಿಯಾಯಿತಿ ; ಅವಧಿ ವಿಸ್ತರಣೆ

ಹರಿಹರ, ಮೇ 11- ಆಸ್ತಿ ತೆರಿಗೆ ಮೇಲೆ ಶೇ.5 ರಷ್ಟು ರಿಯಾಯಿತಿ ಸೌಲಭ್ಯವನ್ನು 2021ರ ಏ.30 ರವರೆಗೆ ನೀಡಲಾಗಿತ್ತು.

ಕೋವಿಡ್ 19 ಸೋಂಕು ನಿಯಂತ್ರಣಕ್ಕಾಗಿ ಲಾಕ್‌ಡೌನ್ ಇರುವ ಪ್ರಯುಕ್ತ ಶೇ.5 ರಷ್ಟು ರಿಯಾ ಯಿತಿ ಸೌಲಭ್ಯವನ್ನು ಸರ್ಕಾರದ ಸುತ್ತೋಲೆಯನ್ವಯ ಪ್ರಸಕ್ತ ಸಾಲಿನ ಜೂನ್ 30 ರವರೆಗೆ ವಿಸ್ತರಿಸಲಾಗಿದ್ದು, ನಿಗದಿತ ದಿನಾಂಕದೊಳಗಾಗಿ ಆಸ್ತಿ ತೆರಿಗೆಯನ್ನು ಪಾವತಿಸಲು ನಗರಸಭೆ ಪೌರಾಯುಕ್ತರು ತಿಳಿಸಿದ್ದಾರೆ.

# ಚಿಕ್ಕವ್ವನಾಗ್ತಿಹಳ್ಳಿ ಮರಿಯಪ್ಪ ಹನುಮಂತಪ್ಪ ನಿಧನ



ದಾವಣಗೆರೆ ತಾಲ್ಲೂಕು ಚಿಕ್ಕವ್ವನಾಗ್ತಿಹಳ್ಳಿ ಗ್ರಾಮದ ವಾಸಿ,
**ಶ್ರೀ ಮರಿಯಪ್ಪ ಹನುಮಂತಪ್ಪ** ಅವರು
ದಿನಾಂಕ 11.05.2021ರ ಮಂಗಳವಾರ ಬೆಳಗಿನ ಜಾವ 3.20ಕ್ಕೆ
ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ.
ಮೃತರಿಗೆ 79 ವರ್ಷ ವಯಸ್ಸಾಗಿತ್ತು. ಪತ್ನಿ, ಇಬ್ಬರು ಪುತ್ರರು,
ಇಬ್ಬರು ಪುತ್ರಿಯರು, ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು
ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ
ಅಂತ್ಯಕ್ರಿಯೆಯು ದಿನಾಂಕ 11.05.2021ರ ಮಂಗಳವಾರ
ಮಧ್ಯಾಹ್ನ ಚಿಕ್ಕವ್ವನಾಗ್ತಿಹಳ್ಳಿ ಗ್ರಾಮದಲ್ಲಿ ನೆರವೇರಿತು.


**ದುಃಖತಪ್ತ ಕುಟುಂಬ ವರ್ಗ**
ಮೊ. : 93808 59928, 78927 52535

## ಧರ್ಮಸ್ಥಳದಿಂದ ಚೀಲೂರು ಸಮುದಾಯ ಭವನಕ್ಕೆ 1 ಲಕ್ಷ ದೇಣಿಗೆ




ನ್ಯಾಮತಿ, ಮೇ 11- ತಾಲ್ಲೂಕಿನ ಚೀಲೂರು ಗ್ರಾಮದ ಶ್ರೀ ಬಸವೇಶ್ವರ ಸಮುದಾಯ ಭವನ ಕಟ್ಟಡಕ್ಕೆ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ವತಿಯಿಂದ ಒಂದು ಲಕ್ಷ ರೂ.ಗಳ ದೇಣಿಗೆಯ ಡಿ.ಡಿ.ಯನ್ನು ಹೊನ್ನಾಳಿ ಧರ್ಮಸ್ಥಳ ಸಂಸ್ಥೆಯ ಯೋಜನಾಧಿಕಾರಿ ಬಸವರಾಜ್ ಅಂಗಡಿ ಅವರು ದೇವಸ್ಥಾನ ಸಮಿತಿಯ ಅಧ್ಯಕ್ಷ ಬಸವರಾಜಪ್ಪ ಅವರಿಗೆ ವಿತರಿಸಿದರು. ಡಾ. ವೀರೇಂದ್ರ ಹೆಗ್ಗಡೆಯವರು ಮಂಜೂರು ಮಾಡಿದ ಡಿ.ಡಿ. ವಿತರಿಸಿದ ಸಂದರ್ಭದಲ್ಲಿ ಸಮಿತಿಯ ಇತರೆ ಸದಸ್ಯರು ಇದ್ದರು.

## ಕೂಲಂಬಿ : 8 ಜನರಿಗೆ ಸೋಂಕು



ಹೊನ್ನಾಳಿ, ಮೇ 11- ಕೊರೊನಾ ಎರಡನೇ ಅಲೆಯ ತೀವ್ರತೆಗೆ ಹೊನ್ನಾಳಿ-ನ್ಯಾಮತಿ ಅವಳಿ ತಾಲ್ಲೂಕುಗಳಲ್ಲಿ ಸಾಕಷ್ಟು ಸಾವು-ನೋವುಗಳು ಸಂಭವಿಸುತ್ತಿದ್ದು, ಯುವಕರು ಅನವಶ್ಯಕವಾಗಿ ಬೈಕ್‌ನಲ್ಲಿ ಓಡಾಡಬಾರದು. ಲಾಕ್‌ಡೌನ್ ನಿಯಮಗಳನ್ನು ಎಲ್ಲರೂ ಪಾಲಿಸಬೇಕು ಎಂದು ಸಿಎಂ ರಾಜಕೀಯ ಕಾರ್ಯದರ್ಶಿ ಎಂ.ಪಿ. ರೇಣುಕಾಚಾರ್ಯ ಮನವಿ ಮಾಡಿದರು. ತಾಲ್ಲೂಕಿನ ಕೂಲಂಬಿ ಗ್ರಾಮದ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಭೇಟಿ ನೀಡಿ ಕೊರೊನಾ ಲಸಿಕೆ ವಿತರಣೆ ಬಗ್ಗೆ ವೈದ್ಯರಿಂದ ಮಾಹಿತಿ ಪಡೆದ ಬಳಿಕ ಅವರು ಮಾತನಾಡಿದರು. ಕೂಲಂಬಿ ಗ್ರಾಮದಲ್ಲಿ 8 ಜನರಿಗೆ ಸೋಂಕು ತಗುಲಿದ್ದು, ಗ್ರಾಮಸ್ಥರು ಎಚ್ಚರಿಕೆಯಿಂದ ಇರಬೇಕು ಎಂದು ತಿಳಿಸಿದರು.

# ಆಮ್ಲಜನಕದ ಬೆಲೆ...




ವನವೆಲ್ಲಾ ಕಲ್ಪತರು, ಗಿಡವೆಲ್ಲಾ ಮರುಜೇವಣಿ ಎಂದು ಅಕ್ಕಮಹಾ ದೇವಿಯು 900 ವರ್ಷಗಳ ಹಿಂದೆಯೇ ತನ್ನ ವಚನದಲ್ಲಿ ಗಿಡಗಳು ಮರು ಜೀವನ ನೀಡುತ್ತವೆ ಎಂದು ಹಾಡಿದ್ದಾಳೆ. ಇಷ್ಟೊಂದು ವಿಜ್ಞಾನ ಮುಂದುವರೆ ದಿದ್ದು, ಗಿಡಗಳಿಂದಲೇ ಆಮ್ಲಜನಕ ಉತ್ಪತ್ತಿಯಾಗು ವುದು ಎಂದು ಗೊತ್ತಿದ್ದರೂ ಜನಗಳು ಗಿಡಮರ ಗಳನ್ನು ಬೆಳೆಸುತ್ತಿಲ್ಲ ಎಂದರೆ ಏನು ಹೇಳಬೇಕು?

ಮೊನ್ನೆ ವಾಟ್ಸಾಪ್‌ನಲ್ಲಿ ಒಂದು ಸಂದೇಶ ಬಂದಿತ್ತು. ಕೊರೊನಾ ಪರಿಸ್ಥಿತಿ ಹೀಗೆಯೇ ಮುಂದುವರೆದರೆ ಮುಂದಿನ ದಿನಗಳಲ್ಲಿ ಮನೆಗಳು ಒಂದು ಐಸೋಲೇಷನ್ ರೂಂ, ನೀರು, ಕರೆಂಟ್ ಜೊತೆಗೆ ಆಕ್ಸಿಜನ್ ಪ್ಲಾಂಟ್ ಅನ್ನು ಹೊಂದಿರಬೇಕಾಗುತ್ತದೆ ಎಂಬರ್ಥವಿರುವ ಇಂಗ್ಲಿಷ್ ಸಂದೇಶ ಅದಾಗಿತ್ತು. ಆಕ್ಸಿಜನ್ ಪ್ಲಾಂಟ್ ಅಂದರೆ ಕನ್ನಡ ದಲ್ಲಿ ಆಮ್ಲಜನಕ ಘಟಕ (ಆಮ್ಲಜನಕ ಉತ್ಪಾದಿಸುವ ಯಂತ್ರ). ಈ ಸಂದೇಶ ಓದಿದಾಗ ನನಗೆ ಆಶ್ಚರ್ಯವಾ ಯಿತು. ಅದಕ್ಕೆ ಖರ್ಚು ಎಷ್ಟು? ಮನೆ ಮನೆಗಳಲ್ಲಿ ಘಟಕ ಎಂದರೆ ಜಾಗ ಎಷ್ಟು ಬೇಕಾಗುತ್ತೆ ? ಅದು ಆಕಸ್ಮಾತ್ ಕೈಕೊಟ್ಟರೆ ಗತಿಯೇನು ? ಪೈಪ್‌ಲೈನ್ ಲೀಕಾದರೆ ಗತಿ ಏನು? ಇದು ಪ್ರತಿಯೊಬ್ಬರಿಗೂ ಸಾಧ್ಯವೇ ? ಹೀಗೆ ಪ್ರಶ್ನೆಗಳು ಮೂಡಿದೆವು. ನಾವು ಇನ್ನಾದರೂ ಎಚ್ಚೆತ್ತುಕೊಳ್ಳ ಬೇಕು. ಆಮ್ಲಜನಕದ ಪ್ಲಾಂಟ್ (ಘಟಕ) ಸ್ಥಾಪಿಸುವುದರ ಬದಲು ಆಮ್ಲಜನಕದ ಪ್ಲಾಂಟ್ (ಗಿಡ) ನೆಟ್ಟರೆ ಹೇಗಿರು ತ್ತದೆ. ಏನೇನೂ ಖರ್ಚಿಲ್ಲದೇ ಆಮ್ಲಜನಕ ದೊರೆಯುವುದಿಲ್ಲವೇ ?

ಹಿಂದಿನ ಕಾಲದಲ್ಲಿ ಮನೆಗೊಂದು ತುಳಸಿ ಗಿಡ, ಊರಿ ಗೊಂದು ಅರಳಿಮರ ಇರಬೇಕು ಎಂದು ಪ್ಲಾನ್ ಮಾಡಿರು ತ್ತಿದ್ದರು. ಇವೆರಡೂ ಅತ್ಯಧಿಕ ಆಮ್ಲಜನಕವನ್ನು ಉತ್ಪಾದಿ ಸುತ್ತವೆ. ಈ ವಿಷಯ ನಮ್ಮ ಹಿರಿಯರಿಗೆ ಗೊತ್ತಿತ್ತು. ತುಳಸಿಯು ಸರ್ವರೋಗ ನಿವಾರಕ ಎಂದು ಮನೆ ಆವರಣ ದಲ್ಲೇ ಬೆಳೆಸುತ್ತಿದ್ದರು. ಆಗ ವಾತಾವರಣ ಶುದ್ಧವಾಗಿ ವೈರಸ್ಸುಗಳು ಆವರಣದಲ್ಲೇ ನಾಶವಾಗುತ್ತಿದ್ದವು. ನಾವು ಹೊರಗಿನಿಂದ ಬಂದಾಗ ಮನೆ ಒಳಹೋಗುವ ಮೊದಲೇ, ತುಳಸಿಗಿಡ ದಾಟುವಾಗ ಸ್ಯಾನಿಟೈಜ್ ಆಗಿರುತ್ತಿದ್ದೆವು. ಗಂಡಸರು ಅರಳಿಕಟ್ಟೆಯಲ್ಲಿ ಕುಳಿತು ಚರ್ಚೆ ಮಾಡುತ್ತಿ ದ್ದರು. ಹೆಣ್ಣು ಮಕ್ಕಳು ಪೂಜೆ ಪುನಸ್ಕಾರ ಎಂದು ಅರಳಿ ಮರದ ಸುತ್ತ ಸುಳಿದಾಡುತ್ತಿದ್ದರು. ಮಕ್ಕಳು ಮನಸೋ ಇಚ್ಛೆ ಯಂತೆ ಅರಳಿಮರದ ಸುತ್ತ ಆಟವಾಡುತ್ತಿದ್ದರು. ಹೀಗಿರುವಾಗ ಯಾವ ವೈರಸ್ ಬಾಧಿಸಲು ಸಾಧ್ಯ ? ಆಮ್ಲಜನಕದ ಕೊರತೆಯಾಗಲು ಹೇಗೆ ಸಾಧ್ಯ ? ಆದರೆ, ಈಗಿನವರಿಗೆ ತುಳಸಿ, ಅರಳಿಮರದ ಪರಿಚಯವೇ ಇಲ್ಲ. ಮನೆ ಕಟ್ಟುವಾಗ ಹೋಗಲಿ ಕುರುಚಲು ಗಿಡಗಳೂ ಇಲ್ಲ. ಸಿಮೆಂಟ್ ಇಟ್ಟಿಗೆಗಳಿಂದ ಪೇವರ್‌ಗಳನ್ನು ಮಾಡಿ, ಮಣ್ಣ ಕಾಣುತ್ತಲೇ ಇಲ್ಲ, ಹೀಗಾದಾಗ ಆಮ್ಲಜನಕ ಎಲ್ಲಿಂದ ಬರಬೇಕು?

ಜೀವಿಗಳ ಉಸಿರಾಟದಿಂದ, ಕಾರ್ಖಾನೆಗಳಿಂದ, ವಾಹನಗಳಿಂದ ಇಂಗಾಲದ ಡೈ ಆಕ್ಸೈಡ್ ಬಿಡುಗಡೆಯಾಗುತ್ತದೆ. ಪರಿಸರ ಕಲುಷಿತ ಗೊಳ್ಳುತ್ತದೆ. ಇಂಗಾಲಾಮ್ಲವನ್ನು ಹೀರಿಕೊಂಡು ಆಮ್ಲಜನಕ ಬಿಡುಗಡೆ ಮಾಡುವ ಗಿಡಮರಗಳೇ ಇಲ್ಲ ಎಂದಾದರೆ ವಾತಾವರಣ ದಲ್ಲಿ ಶುದ್ಧ ಗಾಳಿ ಎಲ್ಲಿಂದ ಬರಬೇಕು. ಆಗ ಕೃತಕ ವಾಗಿಯೇ ಆಮ್ಲಜನಕವನ್ನು ತಯಾರಿಸಬೇಕಾಗುತ್ತದೆ.

ಅದಕ್ಕೆ ಈಗಾಗಲಾದರೂ, ಕೊರೊನಾದಿಂದ ಲಾದರೂ ಪಾಠ ಕಲಿಯೋಣ. ಪ್ರತಿಯೊಬ್ಬರೂ ಒಂದೆರಡು ಗಿಡಗಳನ್ನು ಮನೆಯ ಸುತ್ತಮುತ್ತ ಹಾಕಿಕೊಳ್ಳಿ. ನಿಮ್ಮ ಆಮ್ಲಜನಕವನ್ನು ನೀವೇ ಉಚಿ ತವಾಗಿ ತಯಾರಿಸಿಕೊಳ್ಳಿ. ಮನೆಯಲ್ಲಿ ತುಳಸಿ, ದೊಡ್ಡಪತ್ರೆ, ಒಂದೆಲಗ, ದಾಸವಾಳ, ಕರಿಬೇವು ಗಿಡಗಳು ಇದ್ದರೆ ಒಂದು ಔಷಧಾಲಯವೇ ಇದ್ದಂತೆ.

**ತುಳಸಿ ಮತ್ತು ದೊಡ್ಡಪತ್ರೆ ಬಳಸಿ, ಕೊರೊನಾ ಓಡಿಸಿ**
**ಗಿಡ ಬೆಳೆಸಿ, ಆಮ್ಲಜನಕದ ಕೊರತೆ ನೀಗಿಸಿ.**

**- ಮಮತಾ ನಾಗರಾಜ್**
ಪಾರಂಪರಿಕ ವೈದ್ಯೆ, ದಾವಣಗೆರೆ.

# ಕೊರೊನಾ ತಡೆಗೆ ಸಮುದಾಯದ ಪಾತ್ರ ಮುಖ್ಯ



> ಅಧಿಕಾರಿಗಳ ಮೇಲೆ ಒತ್ತಡ ಹಾಕುವುದರ ಜೊತೆಗೆ, ಆಯಾ ವಾರ್ಡ್ ಸದಸ್ಯರು ಯುವಕರ ತಂಡವನ್ನು ರಚಿಸಿ, ಅವರ ಮೂಲಕ ವಾರ್ಡಿನಲ್ಲಿ ಕೊರೊನಾ ತೊಲಗಿಸಲು ಕಾರ್ಯನಿರ್ವಹಿಸಬೇಕು.
> **- ಎಸ್. ರಾಮಪ್ಪ, ಶಾಸಕರು, ಹರಿಹರ**

ಹರಿಹರ, ಮೇ 11- ಕೊರೊನಾ ರೋಗ ತಡೆಗಟ್ಟಲು ಕೇವಲ ಅಧಿಕಾರಿಗಳು, ಜನಪ್ರತಿನಿಧಿಗಳು ಶ್ರಮವಹಿಸಿದರೆ ಸಾಲದು, ಸಾರ್ವಜನಿಕರ ಸಹಕಾರವೂ ಬಹು ಮುಖ್ಯವಾಗಿರುತ್ತದೆ ಎಂದು ಶಾಸಕ ಎಸ್. ರಾಮಪ್ಪ ಹೇಳಿದರು.

ನಗರಸಭೆ ಸಭಾಂಗಣದಲ್ಲಿ ಕೋವಿಡ್ ತಡೆಗಟ್ಟಲು ಮುಂಜಾಗ್ರತಾ ಕ್ರಮಗಳ ಬಗ್ಗೆ ನಡೆದ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ರೈತರಿಗೆ ಮತ್ತು ತರಕಾರಿ ಮಾರುವವರಿಗೆ ತೊಂದರೆ ಆಗದಂತೆ ಅಧಿಕಾರಿಗಳು ನೋಡಿ ಕೊಳ್ಳಬೇಕು. ಕೆಲವು ಪೊಲೀಸ್ ಸಿಬ್ಬಂದಿಗಳು ಅತಿರೇಕದ ವರ್ತನೆ ತೋರುತ್ತಿದ್ದಾರೆ ಎಂದು ತಿಳಿದು ಬಂದಿದೆ. ಆ ರೀತಿಯ ವರ್ತನೆಯನ್ನು ಬಿಟ್ಟು, ತಪ್ಪು ಮಾಡಿದ ವ್ಯಕ್ತಿಗಳ ಮೇಲೆ ಪ್ರಕ ರಣ ಅಥವಾ ದಂಡವನ್ನು ಹಾಕಿ ಎಂದಿದ್ದಾರೆ. ನಗರಸಭೆಯವರೂ ಸಹ ಸಣ್ಣ ಸಣ್ಣ ವ್ಯಾಪಾರ ಮಾಡುವವರಿಗೆ 3 ರಿಂದ 5 ಸಾವಿರ ರೂ. ದಂಡ ಹಾಕುವುದನ್ನು ನಿಲ್ಲಿಸಬೇಕು ಎಂದರು.

ತಹಶೀಲ್ದಾರ್ ಕೆ.ಬಿ. ರಾಮಚಂದ್ರಪ್ಪ ಮಾತನಾಡಿ, ಗುತ್ತೂರು ಬಳಿ ಕೋವಿಡ್ ಕೇರ್ ಸೆಂಟರ್‌ನಲ್ಲಿ ಸೋಂಕಿತರಿಗೆ ಚಿಕಿತ್ಸೆ, ಔಷಧಿ, ಊಟ, ಉಪಚಾರಕ್ಕೆ ವ್ಯವಸ್ಥೆ ಮಾಡಲಾಗಿದೆ. ಅಲೆಮಾರಿ ಜನಾಂಗದವರಿಗೆ ಆಹಾರ ಕಿಟ್ ವಿತರಣೆ ಮಾಡಲಾಗಿದೆ ಎಂದು ಹೇಳಿದರು.

ನಗರಸಭೆ ಪೌರಾಯುಕ್ತರಾದ ಎಸ್. ಲಕ್ಷ್ಮಿ ಮಾತನಾಡಿ, ನಗರದ ಪ್ರತಿಯೊಂದು ವಾರ್ಡ್‌ಗಳಿಗೆ ಔಷಧಿ ಸಿಂಪಡಣೆ ಮಾಡಲಾಗಿದೆ ಮತ್ತು ಆರೋಗ್ಯ ತಪಾಸಣೆ ಮಾಡಲಾಗಿದೆ ಎಂದು ಹೇಳಿದರು.

ಆರೋಗ್ಯ ಅಧಿಕಾರಿ ಡಾ. ಚಂದ್ರ ಮೋಹನ್ ಮಾತನಾಡಿ, ತಾಲ್ಲೂಕಿನಲ್ಲಿ ಇಲ್ಲಿಯವರೆಗೆ 82873 ವ್ಯಕ್ತಿಗಳ ಕೊರೊನಾ ತಪಾಸಣೆ ಮಾಡಲಾಗಿದೆ. 3697 ಜನರಿಗೆ ಸೋಂಕು ದೃಢಪಟ್ಟಿದ್ದು, ಅದರಲ್ಲಿ 3306 ವ್ಯಕ್ತಿಗಳು ಗುಣಮುಖರಾಗಿ ಉಳಿದ 391 ಸೋಂಕಿತರು ಚಿಕಿತ್ಸೆ ಪಡೆಯುತ್ತಿದ್ದಾರೆ. 34182 ಕೋವಿಶೀಲ್ಡ್ ಮತ್ತು 3768 ಕೊವ್ಯಾಕ್ಸಿನ್ ಲಸಿಕೆ ಹಾಕಲಾಗಿದೆ. ತಾಲ್ಲೂಕಿನಲ್ಲಿ ಔಷಧಿ ಮತ್ತು ಗುಳಿಗೆ ಸೇರಿದಂತೆ, ಯಾವುದೇ ವೈದ್ಯಕೀಯ ವ್ಯವಸ್ಥೆಗೆ ಕೊರತೆ ಇರುವುದಿಲ್ಲ ಎಂದು ವಿವರಿಸಿದರು.

ಸಿಪಿಐ ಸತೀಶ್‌ಕುಮಾರ್ ಮಾತನಾಡಿ, ಇಲ್ಲಿಯವರೆಗೆ 3 ಲಕ್ಷದ 39 ಸಾವಿರ ರೂ. ದಂಡ ವಸೂಲಿ ಮಾಡಲಾಗಿದೆ. ನಿನ್ನೆವರೆಗೆ 150 ವಾಹನಗಳನ್ನು ಹಿಡಿದಿದ್ದು, ಅದರಲ್ಲಿ 140 ವಾಹನಗಳಿಗೆ ದಂಡ ಹಾಕಿ ಬಿಡುಗಡೆ ಮಾಡಲಾಗಿದೆ ಎಂದು ಹೇಳಿದರು.

ನಗರಸಭೆ ಸದಸ್ಯರುಗಳಾದ ಶಂಕರ್ ಖಟಾವ್ಕರ್ ಮಾತನಾಡಿ, ಕೊರೊನಾ ತಪಾ ಸಣೆಗೆ, ದಂಡ ವಸೂಲಿಗೆ, ಔಷಧಿ ಸಿಂಪಡಣೆಗೆ ಹಾಗೂ ಸ್ವಚ್ಛತೆಗೆ ನಗರಸಭೆಯ ಸಿಬ್ಬಂದಿಗಳ ಜೊತೆಗೆ ಇತರೆ ಇಲಾಖೆಯ ಸಿಬ್ಬಂದಿಗಳಿಗೂ ಕೆಲಸ ವಿಭಜನೆ ಮಾಡುವಂತೆ ಸಲಹೆ ನೀಡಿದರು.

ತಾ.ಪಂ. ಇಓ ಗಂಗಾಧರನ್, ದಾದಾ ಖಲಂದರ್ ಮಾತನಾಡಿದರು.

ಈ ಸಂದರ್ಭದಲ್ಲಿ ನಗರಸಭೆ ಅಧ್ಯಕ್ಷೆ ರತ್ನ ಡಿ. ಉಜ್ಜೇಶ್, ಉಪಾಧ್ಯಕ್ಷ ಎಂ.ಎಸ್. ಬಾಬುಲಾಲ್, ನಗರಸಭೆ ಸದಸ್ಯರಾದ ಅಶ್ವಿನಿ ಕೃಷ್ಣ, ನಾಗರತ್ನ, ನೀತಾ ಮೆಹರ್ವಾಡೆ, ಆರ್. ಸಿ. ಜಾವೇದ್, ಅಧಿಕಾರಿಗಳಾದ ಡಾ. ಹನುಮನಾಯ್ಕ್, ರೇಖಾ, ವಿದ್ಯಾ, ನಿರ್ಮಲ, ವಿಜಯಲಕ್ಷ್ಮಿ ಇನ್ನಿತರರಿದ್ದರು.

## ಸ್ವಪ್ನಾಳ ಬದುಕಿಗೆ ಆಸರೆಯಾದ ಮಂಗಳೂರಿನ ಕಾರುಣ್ಯ ನಿಧಿ ಚಾರಿಟೇಬಲ್ ಟ್ರಸ್ಟ್





ಹರಿಹರ, ಮೇ 11- ಇಲ್ಲಿನ 36 ವರ್ಷದ ಸ್ವಪ್ನ ರಕ್ತ ಸಂಬಂದ ಮತ್ತು ವಾತದ ಸಂಬಂಧಿ ಕಾಯಿಲೆಯಿಂದ ಬಳಲುತ್ತಿದ್ದಾರೆ. ಕಳೆದ ಕೆಲವು ವರ್ಷಗಳಲ್ಲಿ ಅವರ ಪತಿ ಕೂಡ ಅವರಿಂದ ವಿಚ್ಛೇದನ ನೀಡಿದ್ದು, ಸ್ವಪ್ನ ಅವರ ತಾಯಿಯವರೂ ಕೂಡ 2 ಕಿಡ್ನಿ ವೈಫಲ್ಯದಿಂದ ಬಳಲುತ್ತಿದ್ದು, ವಾರಕ್ಕೆ 3 ಬಾರಿ ಡಯಾಲಿಸಿಸ್ ನಡೆಯುತ್ತಿದೆ. ಅವರ ಅಸಹಾಯಕ ಪರಿಸ್ಥಿತಿ ಅರಿತ ಮಂಗಳೂರಿನ ಕಾರುಣ್ಯ ನಿಧಿ ಚಾರಿಟೇಬಲ್ ಟ್ರಸ್ಟ್‌ನ ಜಲೀಲ್ ಮೋನು ಪುತ್ತೂರು ಮತ್ತು ಹರ್ಷದ್ ಕೊಪ್ಪರವರ ತಂಡದವರ ಸಹಯೋಗದಲ್ಲಿ ಈ ಕುಟುಂಬಕ್ಕೆ ಕೊರೊನಾ ಸಮಯದಲ್ಲಿ ನೆರವಾಗುವುದರ ಜೊತೆಗೆ ಸ್ವಪ್ನಾರವರಿಗೆ ಮಂಗಳೂರಿನ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಲಾಗಿದೆ.

# ದೊರೆಯದ ಮಾಸ್ಕ್, ಸ್ಯಾನಿಟೈಸರ್

**(1ನೇ ಪುಟದಿಂದ)** ವೈದ್ಯರು, ನರ್ಸ್‌ಗಳು, ಗ್ರೂಪ್ 'ಡಿ' ಸಿಬ್ಬಂದಿ ಹಾಗೂ ಆಶಾ ಕಾರ್ಯಕರ್ತೆಯರು ಪ್ರತಿದಿನ ಕೋವಿಡ್ ಸಂಪರ್ಕ ಹೊಂದಿದ ಜನರೊಂದಿಗೆ ಕಾರ್ಯನಿರ್ವಹಿಸುವುದು ಅನಿವಾರ್ಯವಾಗಿರುತ್ತದೆ. ಇಲಾಖೆ ವತಿಯಿಂದಲೇ ಗುಣಮಟ್ಟದ ಮಾಸ್ಕ್ ಮತ್ತು ಸ್ಯಾನಿಟೈಸರ್ ವಿತರಿಸುವುದು ಅಗತ್ಯವಾಗಿರುತ್ತದೆ.

ಕಳೆದ ಬಾರಿ ಕೋವಿಡ್ ಪರಿಸ್ಥಿತಿಯಲ್ಲಿ ಇಲಾಖೆ ವತಿಯಿಂದಲೇ ಆರೋಗ್ಯ ಇಲಾಖೆ ಸಿಬ್ಬಂದಿ ಅವರಿಗೆ ಮತ್ತು ಆಶಾ ಕಾರ್ಯಕರ್ತರಿಗೆ ಸಂಬಂಧಿಸಿದಂತೆ ಕಾರ್ಯನಿರ್ವಹಿಸುವ ಎಲ್ಲ ನೌಕರ ವರ್ಗದವರಿಗೆ ಮತ್ತು ಆಶಾ ಕಾರ್ಯಕರ್ತರಿಗೆ ಸಂಬಂಧಿಸಿದಂತೆ ಕಾರ್ಯನಿರ್ವಹಿಸುವ ಎಲ್ಲ ನೌಕರ ವರ್ಗದವರಿಗೆ ಇಲಾಖೆಯಿಂದಲೇ ಮಾಸ್ಕ್ ಮತ್ತು ಸ್ಯಾನಿಟೈಸರ್ ವಿತರಿಸಲಾಗಿತ್ತು ಎನ್ನುತ್ತಾರೆ ಆರೋಗ್ಯ ಇಲಾಖೆಯ ನೌಕರರು.

## ಆಡಳಿತ ಅಧಿಕಾರಿಗಳು ಹೇಳುವುದೇನು?

**(1ನೇ ಪುಟದಿಂದ)** ಸ್ಯಾನಿಟೈಸರ್ ನೀಡಲಾಗುವುದು ಎಂದು ತಿಳಿಸಿದ್ದಾರೆ.

ತಮ್ಮ ಜೀವವನ್ನೇ ಪಣವಾಗಿಟ್ಟು, ಕಾರ್ಯನಿರ್ವಹಿಸುವ ಆರೋಗ್ಯ ಇಲಾಖೆಯ ಎಲ್ಲಾ ಸಿಬ್ಬಂದಿ ವರ್ಗದವರಿಗೆ ಮತ್ತು ಆಶಾ ಕಾರ್ಯಕರ್ತರಿಗೆ ತಕ್ಷಣವೇ ಇಲಾಖಾ ವತಿಯಿಂದ ಗುಣಮಟ್ಟದ ಮಾಸ್ಕ್ ಮತ್ತು ಸ್ಯಾನಿಟೈಸರ್ ವಿತರಿಸುವ ಮೂಲಕ ಅವರಿಗೆ ಉತ್ತಮ ರೀತಿಯಲ್ಲಿ ಕಾರ್ಯನಿರ್ವಹಿಸಲು ಆರೋಗ್ಯ ಇಲಾಖೆ ಮತ್ತು ಜಿಲ್ಲಾಧಿಕಾರಿಗಳು ಗಮನಹರಿಸಿ, ಸೂಕ್ತ ಕ್ರಮ ಕೈಗೊಳ್ಳುವರೇ ಎಂಬುದನ್ನು ಕಾದು ನೋಡಬೇಕಿದೆ.

# ಎರಡು ಕೋಟಿ ಲಸಿಕೆಗಾಗಿ ಟೆಂಡರ್

**(1ನೇ ಪುಟದಿಂದ)** ಇದೇ 14ಕ್ಕೆ ಪೂರೈಕೆ ಶುರುವಾಗುತ್ತದೆ. ಅಲ್ಲದೆ, ಇನ್ನೂ 25 ಲಕ್ಷ ಮಾತ್ರೆ ಖರೀದಿಸುವಂತೆ ಸೂಚಿಸಿದ್ದೇನೆ. ಇದು ರಾಜ್ಯದ ಎಲ್ಲ ಆಸ್ಪತ್ರೆಗಳಲ್ಲೂ ಲಭ್ಯ ಇರಬೇಕು. ಇದೇ ವೇಳೆ ಮುಖ್ಯ ಕಾರ್ಯದರ್ಶಿಗಳ ಜತೆ ಮಾತನಾಡಿದ ಅವರು, ನೋಟಿಸ್ ಕೊಟ್ಟರೂ ಸಕಾಲಕ್ಕೆ ರೆಮ್‌ಡಿಸಿವರ್ ಪೂರೈಕೆ ಮಾಡದ ಕಂಪನಿಗಳ ಮೇಲೆ ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳುವಂತೆ ಸೂಚಿಸಿದರು.

ಖಾಸಗಿ ಆಸ್ಪತ್ರೆಗಳಲ್ಲಿ ಕೋವಿಡ್ ಸೋಂಕಿತರನ್ನು ದಾಖಲು ಮಾಡಿಕೊಳ್ಳುವ ಮುನ್ನ ಭೌತಿಕ ಪರೀಕ್ಷೆ ನಡೆಸಿಯೇ ದಾಖಲು ಮಾಡಿಕೊಳ್ಳಬೇಕು. ಹೀಗೆ ಮಾಡುವುದರಿಂದ ಗಂಭೀರ ಸೋಂಕಿತರಿಗೆ ಹಾಸಿಗೆಗಳು ಸಿಗುತ್ತವೆ. ಈ ಬಗ್ಗೆ ಅಧಿಕಾರಿಗಳಿಗೆ ನಿರ್ದೇಶನ ನೀಡಲಾಗಿದೆ ಎಂದು ಉಪ ಮುಖ್ಯಮಂತ್ರಿ ಹೇಳಿದರು. ಲಸಿಕೆಗಾಗಿ ಹಳ್ಳಿಗಳಿಗೆ ಹೋಗುವುದು ಬೇಡ, ನಗರದ ಜನರು ಲಸಿಕೆ ಪಡೆಯಲು ಗ್ರಾಮೀಣ ಪ್ರದೇಶಕ್ಕೆ ಹೋಗುವುದು ಬೇಡ. ಅವರು ನಗರದಲ್ಲೇ ಲಸಿಕೆ ಪಡೆಯಲಿ.

ಬೇಡಿಕೆಗೆ ತಕ್ಕಂತೆ ಲಸಿಕೆ ಪೂರೈಕೆ ಮಾಡಲು ಎಲ್ಲ ಕ್ರಮ ವಹಿಸಲಾಗಿದೆ ಎಂದ ಡಿಸಿಎಂ, ಈ ಬಗ್ಗೆ ಸೂಕ್ತ ಮಾರ್ಗಸೂಚಿ ಬಿಡುಗಡೆ ಮಾಡುವಂತೆ ಅಧಿಕಾರಿಗಳಿಗೆ ಸೂಚಿಸಿದ್ದಾಗಿ ಮಾಹಿತಿ ನೀಡಿದರು.

## ಗೋವಾ ಸರ್ಕಾರಿ ಆಸ್ಪತ್ರೆಯಲ್ಲಿ ಸೋಂಕಿತರ ಸಾವು

**(1ನೇ ಪುಟದಿಂದ)** ಸಾವುಗಳು ಸಂಭವಿಸಿವೆ ಎಂಬುದು ವಾಸ್ತವವಾಗಿದೆ. ಆದರೆ, ಕಾರಣ ಏನು ಎಂಬುದು ತಿಳಿದು ಬಂದಿಲ್ಲ ಎಂದವರು ತಿಳಿಸಿದ್ದಾರೆ.

ಜಿ.ಎಂ.ಸಿ.ಹೆಚ್. ಆಸ್ಪತ್ರೆಗೆ ಭೇಟಿ ನೀಡಿರುವ ಗೋವಾ ಮುಖ್ಯಮಂತ್ರಿ ಪ್ರಮೋದ್ ಸಾವಂತ್, ವೈದ್ಯಕೀಯ ಆಕ್ಸಿಜನ್ ಲಭ್ಯತೆ ಹಾಗೂ ಕೊರೊನಾ ವಾರ್ಡ್‌ಗಳಿಗೆ ಪೂರೈಕೆಯಾದ ಆಕ್ಸಿಜನ್ ನಡುವಿನ ವ್ಯತ್ಯಾಸದಿಂದಾಗಿ ರೋಗಿಗಳಿಗೆ ಸಮಸ್ಯೆಯಾಗಿರಬಹುದು. ಆದರೆ, ರಾಜ್ಯದಲ್ಲಿ ಆಕ್ಸಿಜನ್ ಕೊರತೆ ಇಲ್ಲ ಎಂದಿದ್ದಾರೆ.

ಪತ್ರಕರ್ತರೊಂದಿಗೆ ಮಾತನಾಡಿದ ರಾಣೆ, ಸೋಮವಾರದಂದು ಜಿ.ಎಂ.ಸಿ.ಹೆಚ್. ಆಸ್ಪತ್ರೆಯಲ್ಲಿ ಆಕ್ಸಿಜನ್ ಪೂರೈಕೆಯಲ್ಲಿ ಸಮಸ್ಯೆಯಾಗಿತ್ತು ಎಂದು ಒಪ್ಪಿಕೊಂಡಿದ್ದು, ಉನ್ನತ ಹಂತದ ತನಿಖೆಯ ನಂತರ ಸಾವುಗಳ ಕಾರಣ ಬಯಲಾಗಲಿದೆ ಎಂದಿದ್ದಾರೆ.

ಆಸ್ಪತ್ರೆಗೆ ಸೋಮವಾರ 1,200 ಜಂಬೋ ಸಿಲಿಂಡರ್‌ಗಳು ಬೇಕಾಗಿದ್ದವು. ಇವುಗಳ ಪೈಕಿ 400 ಮಾತ್ರ ಪೂರೈಕೆಯಾಗಿವೆ ಎಂದು ರಾಣೆ ಹೇಳಿದ್ದಾರೆ.

## ಜಿಲ್ಲಾ ಕ್ರೀಡಾಪಟುಗಳಿಗೆ ಆದ್ಯತೆ ಕೊಟ್ಟು ಲಸಿಕೆ ಬೇಗ ನೀಡಿ: ದಿನೇಶ್ ಕೆ ಶೆಟ್ಟಿ ಮನವಿ

ದಾವಣಗೆರೆ, ಮೇ 11 - ಜಿಲ್ಲೆಯಲ್ಲಿ ಕ್ರೀಡಾಪಟುಗಳಿಗೆ ಮೊದಲ ಆದ್ಯತೆ ಕೊಟ್ಟು ಲಸಿಕೆ ನೀಡಿ ಕ್ರೀಡಾಪಟುಗಳ ಹಿತಾಸಕ್ತಿಯನ್ನು ಕಾಪಾಡಬೇಕು ಎಂದು ದಿನೇಶ್ ಕೆ ಶೆಟ್ಟಿ ಅವರು ತಿಳಿಸಿದರು

ಜಿಲ್ಲೆಯಲ್ಲಿ ರಾಜ್ಯ ಮತ್ತು ರಾಷ್ಟ್ರ ತಂಡಗಳನ್ನು ಪ್ರತಿ ಪ್ರತಿನಿಧಿಸುವ ಆಟಗಾರರು ಕ್ರೀಡಾಪಟುಗಳ ಸಂಖ್ಯೆ ಹೆಚ್ಚಾಗಿದ್ದು ಅವರ ಆರೋಗ್ಯ ಮತ್ತು ಹಿತದೃಷ್ಟಿಯಿಂದ ಎಲ್ಲಾ ಕ್ರೀಡಾಪಟುಗಳಿಗೆ ಮೊದಲ ಆದ್ಯತೆ ಕೊಟ್ಟು ಕೋವಿಡ್ ಲಸಿಕೆಯನ್ನು ನೀಡುವಂತೆ ಮಾನ್ಯ ಜಿಲ್ಲಾಧಿಕಾರಿಗಳಾದ ಮಹಾಂತೇಶ್ ಬೀಳಗಿ ಮತ್ತು ಜಿಲ್ಲಾ ಆರೋಗ್ಯಾಧಿಕಾರಿಗಳಲ್ಲಿ ಜಿಲ್ಲಾ ಕ್ರೀಡಾಪಟುಗಳ ಸಂಘದ ಅಧ್ಯಕ್ಷ ದಿನೇಶ್ ಕೆ ಶೆಟ್ಟಿ ಮನವಿ ಮಾಡಿದ್ದಾರೆ.

## ಲಾಕ್‌ಡೌನ್‌ನಿಂದ ಸೋಂಕು ಇಳಿಕೆ

**(1ನೇ ಪುಟದಿಂದ)** ಮೊದಲು ಸೋಂಕು ನಿಯಂತ್ರಣಕ್ಕೆ ಬರಲಿ. ನಂತರ ವಿಶೇಷ ಪ್ಯಾಕೇಜ್ ಘೋಷಣೆ ಮಾಡುವ ಬಗ್ಗೆ ತೀರ್ಮಾನ ಕೈಗೊಳ್ಳಲಾಗುವುದು.

ಕೇಂದ್ರ ಸರ್ಕಾರದಿಂದ ರಾಜ್ಯಕ್ಕೆ ಎಲ್ಲ ರೀತಿಯ ನೆರವು ಸಿಗುತ್ತಿದ್ದು, ತಾವು ಅಲ್ಲಿಗೆ ಹೋಗಬೇಕಾದ ಅಗತ್ಯವಿಲ್ಲ. ಇಲ್ಲಿಯೇ ಇದ್ದು ಪರಿಸ್ಥಿತಿ ನಿಭಾಯಿಸುತ್ತೇವೆ. ಪ್ರಧಾನಿ ನರೇಂದ್ರ ಮೋದಿ ಅವರು ಆಗಿಂದಾಗ್ಗೆ ನನಗೆ ದೂರವಾಣಿ ಕರೆ ಮಾಡಿ, ಇಲ್ಲಿನ ಸ್ಥಿತಿಗತಿ ಬಗ್ಗೆ ಮಾಹಿತಿ ಪಡೆದಿದ್ದಾರೆ. ನಮ್ಮ ಕೋರಿಕೆಗೆ ಕೇಂದ್ರ ಸರ್ಕಾರ ಮನ್ನಣೆ ನೀಡುತ್ತಿದೆ ಎಂದರು. ಕೊರೊನಾ ಸೋಂಕಿನಿಂದ ಗುಣಮುಖರಾದವರು 500ಕ್ಕೂ ಹೆಚ್ಚು ಮಂದಿ ಆಸ್ಪತ್ರೆಯಲ್ಲಿ ಚಿಕಿತ್ಸೆಗಾಗಿ ಮುಂದುವರೆದಿದ್ದಾರೆ. ಇದರಿಂದ ಬೇರೆ ಸೋಂಕಿತರಿಗೆ ಆಸ್ಪತ್ರೆಯಲ್ಲಿ ಅವಕಾಶವಿಲ್ಲದಂತಾಗುತ್ತದೆ. ಗುಣಮುಖರಾ ದವರನ್ನು ಆಸ್ಪತ್ರೆಯಿಂದ ಖಾಲಿ ಮಾಡಿಸುವಂತೆ ಸೂಚಿಸಲಾಗಿದೆ ಎಂದರು.

# ಲಸಿಕಾ ಕೇಂದ್ರದಲ್ಲಿ ಗೊಂದಲ

ಓದುಗರ ಪತ್ರ

**ಮಾನ್ಯರೆ,**

ಕಳೆದ ಮೇ 8 ರಂದು ಬೆಳಿಗ್ಗೆ ಏಳು ಗಂಟೆಗೆ, ಮೇ 10 ರಂದು ಬೆಳಿಗ್ಗೆ 6 ಗಂಟೆಗೆ ಹೋಗಿ ಸರತಿ ಸಾಲಿನಲ್ಲಿ ನಿಂತರೂ ಕೊರೊನಾ ಸೋಂಕಿಗೆ ನೀಡಲಾಗುತ್ತಿರುವ ಕೋವ್ಯಾಕ್ಸಿನ್ ಎರಡನೇ ಡೋಸ್‌ನ ಟೋಕನ್ ಸ್ವಲ್ಪದರಲ್ಲಿ ಕೈ ತಪ್ಪಿದ್ದಕ್ಕೆ ನಿರಾಸೆ ಆಗಿದ್ದರೂ...." ಮರಳಿ ಯತ್ನವ ಮಾಡು.. ಮರಳಿ ಯತ್ನವ ಮಾಡು ಗುರಿ ಮುಟ್ಟುವವರೆಗೆ..." ಎನ್ನುವ ವಾಣಿ ನೆನಪಾಗಿ ಖಂಡಿತಾ ಟೋಕನ್ ಸಿಕ್ಕೇಸಿಗುತ್ತೆ ಎಂದು ಇಂದು ಬೆಳಿಗ್ಗೆ 5.00 ಗಂಟೆಗೆ ಹೋಗಿ ನೋಡಿದರೆ 30 ರಿಂದ 40 ಜನ ಹಿರಿಯ ನಾಗರಿಕರು ಅಲ್ಲಲ್ಲಿ ಜಮಾಯಿಸಿದ್ದರು. ಯಾಕಿನ್ನೂ ಜನರು ಕ್ಯೂನಲ್ಲಿ ನಿಂತಿಲ್ಲವಲ್ಲಾ ಎಂದು ಕತ್ತಲಲ್ಲಿ ಗಮನಿಸಿದರೆ..... ಅಲ್ಲೊಬ್ಬರು, ಇಲ್ಲೊಬ್ಬರು ಸಾಲಿನಲ್ಲಿ ಇದ್ದರೂ... ಸರತಿಯಲ್ಲಿ ಕಂಡದ್ದು ಚಪ್ಪಲಿ, ಬೂಟು, ಹೆಲ್ಮೆಟ್ ಹಾಗೂ ಕೈಚೀಲಗಳು.... ಅವುಗಳ ವಾರಸುದಾರರು ಅಲ್ಲಲ್ಲಿರುವ ಕಲ್ಲು ಬೆಂಚಿನ ಮೇಲೆ ಕುಳಿತಿದ್ದರು.

ಇನ್ನೇನು ಬೆಳಗಿನ 6.00 ಸಮಯ.... ಇನ್ನೆರಡು ಗಂಟೆಗಳಲ್ಲಿ ಲಸಿಕಾ ಟೋಕನ್ ಸಿಗುತ್ತದೆ ಎಂದು ಮಾತನಾಡುತ್ತಿದ್ದವರಲ್ಲಿ ಒಬ್ಬರು.... ಸಾರ್ ಇಂದು ಕೋವ್ಯಾಕ್ಸಿನ್ ಇಲ್ಲಾ... ಕೋವಿಶೀಲ್ಡ್ ಕೊಡ್ತಾರಂತೆ ಎಂದು ಹೇಳುತ್ತಿದ್ದಂತೆ.... ಲಸಿಕೆ ಸಿಗುವ ಆಸೆ ಕಮರಿ ಹೋಯ್ತು. ಅಷ್ಟರಲ್ಲಿ ಸೆಕ್ಯೂರಿಟಿ ಗಾರ್ಡ್ ಬಂದು 'ಇಂದು ಕೋವಿಶೀಲ್ಡ್ ಲಸಿಕೆ ನೀಡ್ತಾರೆ' ಎಂದು ಹೇಳಿದಾಗ ಅಲ್ಲಿದ್ದವರಿಗೆ ಆಶ್ಚರ್ಯ ಹಾಗೂ ಆಘಾತವಾಯ್ತು. ಅಲ್ಲಿನ ಗೋಡೆ ಮೇಲೆ 'ಕೋವ್ಯಾಕ್ಸಿನ್' ಎಂದು ಬರೆದ ಜೆರಾಕ್ಸ್ ಪ್ರತಿ ಅಂಟಿಸಿದ್ದನ್ನು ತೋರಿಸುತ್ತಾ...' ನೋಡ್ರಿ ಇಲ್ಲಿ ಕೋವ್ಯಾಕ್ಸಿನ್ಸ್ ಅಂತಾ ಇದೆ. ಅದಕ್ಕೆ ಅಲ್ಲವೇ ನಾವು ಬೆಳಿಗ್ಗೆ ನಾಲ್ಕಕ್ಕೇ ಬಂದು ಕ್ಯೂನಲ್ಲಿ ನಿಂತಿದ್ದೇವೆ... ಈಗ ನೀವು ಕೋವಿಶೀಲ್ಡ್ ಅಂಥಾ ಹೇಳ್ತೀರಾ....' ಎಂದು ಸೆಕ್ಯೂರಿಟಿ ಗಾರ್ಡ್ ಜೊತೆಗೆ ವಾಗ್ವಾದ ವಾಯ್ತು... ಅಷ್ಟರಲ್ಲಿ ಅವರ ಹಿರಿಯ ಅಧಿಕಾರಿಯ ಮೊಬೈಲಿಗೆ ಮಾತಾಡಿದಾಗ ಕನ್ಫರ್ಮ್ ಆಯಿತು.... ಇಂದು ಕೋವ್ಯಾಕ್ಸಿನ್ ಲಸಿಕಾಕರಣ ಇಲ್ಲ... ಕೋವಿಶೀಲ್ಡ್ ಮೊದಲ ಡೋಸ್ ಆಗಿ 18 ವರ್ಷ ಮೇಲ್ಪಟ್ಟವರಿಗೆ 44 ವರ್ಷದವರಿಗೆ ಎಂದು ಮನವರಿಕೆ ಆಗುತ್ತಿದ್ದಂತೆ... ಗೊಂದಲದ ಗೂಡಿಂದ ಹೊರಬಂದು ಮನೆಗೆ ಬಂದಾಗ 'ಜನತಾವಾಣಿ'ಯಲ್ಲಿನ ವರದಿ ಇಂದು ಕೋವಿಶೀಲ್ಡ್ ಎಂದಿತ್ತು. ಹಾಗೇನೇ ಪ್ರಜಾ ಟಿವಿಯಲ್ಲಿ 'ಸದ್ಯಕ್ಕೆ ರಾಜ್ಯಕ್ಕಿಲ್ಲ ಕೋವ್ಯಾಕ್ಸಿನ್ಸ್ ಲಸಿಕೆ' ಎಂದು ಪ್ರಸಾರವಾಗುತ್ತಿತ್ತು.

'ಮರಳಿ ಯತ್ನವ ಮಾಡು.. ಮರಳಿ ಯತ್ನವ ಮಾಡು.. ಕೋವ್ಯಾಕ್ಸಿನ್ಸ್ ಲಸಿಕೆ ದಾವಣಗೆರೆಗೆ ಬಂದ ನಂತರವೇ...' ಎಂದು ಮನಸಲ್ಲೇ ಹೇಳ್ತಾ...

2ನೇ ಡೋಸ್ ಸಿಗದಿದ್ದರೇನಂತೆ... ಮುಖಕ್ಕೆ ಮಾಸ್ಕ್ ಧರಿಸೋಣ... ಅನಾವಶ್ಯಕವಾದ ಓಡಾಟ ನಿಲ್ಲಿಸೋಣ.... ಸಾಮಾಜಿಕ ಅಂತರ ಪಾಲಿಸೋಣ... ಆಗಾಗ್ಗೆ ಕೈಗಳ ಸ್ವಚ್ಛತೆ ಮಾಡೋಣ... ಸರ್ಕಾರದ ಲಾಕ್‌ಡೌನ್ ನಿಯಮಗಳನ್ನು ಪಾಲಿಸೋಣ... ಕೊರೊನಾ ಮಹಾಮಾರಿಯನ್ನು ಓಡಿಸಲು ಮುಂದಾಗೋಣ ಎಂದು ಹೇಳ್ತಾ ನಾನು 3-4 ದಿನಗಳ ನಂತರ ನನ್ನ ಲಸಿಕೆ ಪಡೆಯಲು ಹೋದ ಅನುಭವ ಹಂಚಿ ಕೊಂಡಿರುವೆ. ಧನ್ಯವಾದಗಳು.

**- ರಘುನಾಥರಾವ್ ತಾಪ್ಸೆ,**
ನಿವೃತ್ತ ಬ್ಯಾಂಕ್ ಅಧಿಕಾರಿ,
ದಾವಣಗೆರೆ.

## ಮನೆಯಲ್ಲೇ ಚಿಕಿತ್ಸೆ : ಉಚಿತ ಆಹಾರ

**(1ನೇ ಪುಟದಿಂದ)** ಮಂಡಳಿಗಳ ಒಕ್ಕೂಟ, ನಗರದ ಸೇವಾ ಭಾರತಿ ಹಾಗೂ ಭಾರತ ವಿಕಾಸ ಪರಿಷತ್‌ಗಳು ಜೊತೆಯಾಗಿವೆ ಎಂದವರು ಹೇಳಿದ್ದಾರೆ.

ಆಸ್ಪತ್ರೆಯಲ್ಲಿರುವ ರೋಗಿಗಳಿಗೆ ಕಳೆದ ಹತ್ತು ದಿನಗಳಿಂದ ಆಹಾರ ಪೂರೈಕೆ ಮಾಡ ಲಾಗುತ್ತಿತ್ತು. ಈಗ ಮನೆಯಲ್ಲಿರುವವರಿಗೂ ಆಹಾರ ಪೂರೈಕೆ ಮಾಡಲಾಗುವುದು ಎಂದು ವೀರೇಶ್ ಹೇಳಿದ್ದಾರೆ. ಜೈನ ಸಮಾಜದ ವತಿ ಯಿಂದ ಈ ಹಿಂದೆ ಕೋವಿಡ್ ಕೇರ್ ಸೆಂಟರ್ ಸ್ಥಾಪಿಸಲಾಗಿತ್ತು. ಈಗ ಮುಸ್ಲಿಮ್ ಸಮು ದಾಯ ಸೇರಿದಂತೆ 2-3 ಸಮುದಾಯದವರು ಕೋವಿಡ್ ಕೇರ್ ಸೆಂಟರ್‌ಗೆ ಮುಂದೆ ಬಂದಿದ್ದಾರೆ. ಇವರಿಗೆ ಅಗತ್ಯ ಸಹಕಾರ ನೀಡಲಾಗುವುದು ಎಂದವರು ತಿಳಿಸಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಪಾಲಿಕೆ ಸ್ಥಾಯಿ ಸಮಿತಿ ಅಧ್ಯಕ್ಷ ಎಲ್.ಡಿ. ಗೋಣೆಪ್ಪ, ಮುಖಂಡರಾದ ವೈ.ವಿ. ವಿನಯ್, ಮಹೇಶ್ ಶೆಟ್ಟಿ, ಜಯಪ್ರಕಾಶ್, ಸತ್ಯಪ್ರಕಾಶ್ ಮತ್ತಿತರರು ಉಪಸ್ಥಿತರಿದ್ದರು.

## ಪರಿಸ್ಥಿತಿ ಸುಧಾರಣೆಯ ಲಕ್ಷಣ ಗೋಚರ

**(1ನೇ ಪುಟದಿಂದ)** ಪ್ರಕರಣಗಳ ಸಂಖ್ಯೆ ಏರುಮುಖವಾಗಿದೆ ಎಂದು ತಿಳಿಸಿದ್ದಾರೆ.

ಪ್ರಸಕ್ತ 13 ರಾಜ್ಯಗಳಲ್ಲಿ ಲಕ್ಷಕ್ಕೂ ಹೆಚ್ಚು ಸಕ್ರಿಯ ಸೋಂಕಿತರಿದ್ದಾರೆ. 26 ರಾಜ್ಯಗಳಲ್ಲಿ ಸೋಂಕು ಪತ್ತೆ ಪ್ರಮಾಣ ಶೇ.15ರಷ್ಟಿದೆ.

14 ದಿನಗಳ ನಂತರ ದೇಶದಲ್ಲಿ ಕೊರೊನಾ ಸೋಂಕು ಪತ್ತೆಯಾಗುವ ಪ್ರಮಾಣ 3.29 ಲಕ್ಷಕ್ಕೆ ಕುಸಿದಿದೆ ಎಂದು ಕೇಂದ್ರ ಆರೋಗ್ಯ ಸಚಿವಾಲಯ ತಿಳಿಸಿದೆ. ಇದೇ ಅವಧಿಯಲ್ಲಿ 3,876 ಸಾವುಗಳು ಸಂಭವಿಸಿವೆ.

ಎರಡು ತಿಂಗಳ ಕಾಲ ನಿರಂತರವಾಗಿ ಏರಿಕೆಯಾಗುತ್ತಾ ಬಂದಿದ್ದ ಸಕ್ರಿಯ ಸೋಂಕಿತರ ಸಂಖ್ಯೆ ಮೊದಲ ಬಾರಿಗೆ ಇಳಿಕೆಯಾಗಿದೆ. ಸಕ್ರಿಯ ಸೋಂಕಿತರ ಸಂಖ್ಯೆ ಈಗ 37.15 ಲಕ್ಷವಾಗಿದೆ.

ಮಂಗಳವಾರದಂದು ಕೊರೊನಾದಿಂದ 3.55 ಲಕ್ಷ ಜನರು ಚೇತರಿಸಿಕೊಂಡಿದ್ದಾರೆ. ಫೆ. 24ರ ನಂತರ ಮೊದಲ ಬಾರಿಗೆ ಪ್ರತಿನಿತ್ಯ ಕಂಡು ಬರುವ ಸೋಂಕಿರಿಗಿಂತ ಗುಣಮುಖರಾದವರ ಸಂಖ್ಯೆ ಹೆಚ್ಚಾಗಿದೆ.

## ಲಸಿಕೆ ಉತ್ಪಾದಿಸಲು ಆಸಕ್ತಿ

**(1ನೇ ಪುಟದಿಂದ)** ಉತ್ಪಾದನೆಗೆ ಹೆಚ್ಚಿಸಲು ಬಯಸುವು ದಾಗಿ ಅವರು ಹೇಳಿದ್ದಾರೆ. ಅಸ್ಟ್ರಾಜೆನೆಕಾದ ಕೊರೊನಾ ಲಸಿಕೆಯನ್ನು ಅಮೆರಿಕದ ಬಾಲ್ಟಿಮೋರ್‌ನಲ್ಲಿ ಉತ್ಪಾದಿಸ ಲಾಗಿದೆ. ಇದರ ದಕ್ಷತೆ ಇನ್ನೂ ಸಾಬೀತಾಗಿಲ್ಲ. ಇವುಗಳಿಗೆ ಇನ್ನೂ ಪ್ರಮಾಣ ಪತ್ರ ದೊರೆತಿಲ್ಲ. ಇವುಗಳನ್ನು ಯಾರೂ ಬಳಸುವಂತಿಲ್ಲ ಹಾಗೂ ರಫ್ತು ಮಾಡುವಂತಿಲ್ಲ ಎಂದು ಸ್ಮಿತ್ ಹೇಳಿದ್ದಾರೆ. ಅಸ್ಟ್ರಾಜೆನೆಕಾದ 60 ದಶಲಕ್ಷ ಲಸಿಕೆಗಳು ಅಮೆರಿಕ ದಲ್ಲಿ ಲಭ್ಯವಿವೆ. ಇವುಗಳು ದೊರೆತ ನಂತರ ರಫ್ತು ಮಾಡಲಾಗುವುದು. ಇದರಲ್ಲಿ ಹೆಚ್ಚಿನ ಪಾಲು ಭಾರತಕ್ಕೆ ದೊರೆಯಲಿದೆ ಎಂದು ಅಮೆರಿಕದ ಶ್ವೇತ ಭವನ ತಿಳಿಸಿತ್ತು.

## 6ನೇ ಬಾರಿ ತೈಲ ಬೆಲೆ ಏರಿಕೆ

**(1ನೇ ಪುಟದಿಂದ)** ತಿಳಿಸಿವೆ. ಮೇ 4ರ ನಂತರ ಆರನೇ ಬಾರಿಗೆ ತೈಲ ಬೆಲೆ ಏರಿಕೆ ಮಾಡಲಾಗಿದೆ. ರಾಜಸ್ತಾನ, ಮಧ್ಯ ಪ್ರದೇಶ ಹಾಗೂ ಮಹಾರಾಷ್ಟ್ರಗಳ ಬಹುತೇಕ ಭಾಗಗಳಲ್ಲಿ ಪೆಟ್ರೋಲ್ ಬೆಲೆ ಲೀಟರ್‌ಗೆ 100 ರೂ.ಗಳಿಗೂ ಹೆಚ್ಚಾಗಿದೆ. ರಾಜಸ್ಥಾನದ ಶ್ರೀ ಗಂಗಾನಗರ ಜಿಲ್ಲೆಯಲ್ಲಿ ಪೆಟ್ರೋಲ್ ಬೆಲೆ ಅತಿ ಹೆಚ್ಚಿನ 102.70 ರೂ. ಆಗಿದೆ.

## ಜಿಲ್ಲೆಯಲ್ಲಿ 212 ಪ್ರಕರಣ

**(1ನೇ ಪುಟದಿಂದ)** ಕಂಡು ಬಂದಿದ್ದಾರೆ. ಹರಿಹರದಲ್ಲಿ 48, ಜಗಳೂರಿನಲ್ಲಿ 10, ಚನ್ನಗಿರಿಯಲ್ಲಿ 16, ಹೊನ್ನಾಳಿಯಲ್ಲಿ 22 ಹಾಗೂ ಹೊರ ಜಿಲ್ಲೆಗಳ ಐವರು ಸೋಂಕಿತರು ಕಂಡು ಬಂದಿದ್ದಾರೆ.

# ಮಾನವೀಯತೆಯನ್ನು ಜೀವಂತವಾಗಿಟ್ಟಲ್ಲಿ ಕೊರೊನಾ ಮುಕ್ತ ಭಾರತ

## ಮಾಧ್ಯಮ ಮಿತ್ರರಲ್ಲಿ ನನ್ನದೊಂದು ವಿನಂತಿ

ಕಳೆದ ಒಂದೂವರೆ ತಿಂಗಳಿಂದ ಕೊರೊನಾ ಎರಡನೇ ಅಲೆ ಅತ್ಯಂತ ವೇಗವಾಗಿ ಮತ್ತು ಭೀಕರವಾಗಿ ವ್ಯಾಪಿಸುತ್ತಿದೆ ನಿಜ. ಆದರೆ, ಕೊರೊನಾಕ್ಕಿಂತ ವೇಗವಾಗಿ ಮಾಧ್ಯಮದವರು, ಸೋಷಿಯಲ್ ಮೀಡಿಯಾ, ವಿಡಿಯೋ ತುಣುಕು ವಾಟ್ಸಾಪ್ ಇತ್ಯಾದಿ ಮಾಧ್ಯಮಗಳೂ ಜನರನ್ನು ತಲುಪಿ, ಇನ್ನಷ್ಟು ಭೀಕರವಾಗಿ ಫೋಟೋ, ವರದಿಗಳನ್ನು ಇತ್ಯಾದಿ ಬಿಂಬಿಸುತ್ತಿದ್ದಾರೆ. ಇದರಿಂದ ಜನತೆಯ ಆತಂಕ ಇನ್ನಷ್ಟು ಹೆಚ್ಚಾಗಿ, ಮನೋಸ್ಥೈರ್ಯ ಕಳೆದುಕೊಂಡು, ಸಾವು - ನೋವುಗಳ ಸಂಖ್ಯೆಯೂ ಕೂಡ ಹೆಚ್ಚಾಗುತ್ತಿದೆ. ಆದರೆ, ಮಿತ್ರರೇ ನೀವು ಹೀಗೂ ಮಾಡಬಹುದು. ಪ್ರತಿ ಜಿಲ್ಲೆಯಲ್ಲಿ ಯಾವ ಯಾವ ಆಸ್ಪತ್ರೆಗಳಲ್ಲಿ ಕೋವಿಡ್ ಸೋಂಕಿತರು ದಾಖಲಾಗಿ, ಚಿಕಿತ್ಸೆ ಪಡೆದು ಗುಣಮುಖರಾಗಿ ಹಿಂತಿರುಗಿದ್ದಾರೆ ಎಂಬ ವಿವರಗಳನ್ನು ಜನರಿಗೆ ತಲುಪಿಸಿ. ಒಂದಿಷ್ಟು ಧೈರ್ಯ, ಸಾಂತ್ವನ ಹೇಳಬೇಕಾದದ್ದು ನಿಮ್ಮಗಳ ಕರ್ತವ್ಯ ಕೂಡ ಅಲ್ಲವೇ? ಕಾಯಿಲೆಗೆ ಕೇವಲ ಔಷಧಿ ದೊರೆತರೆ ಸಾಲದು. ಆತ್ಮಸ್ಥೈರ್ಯ ನೀಡುವ, ಆತ್ಮೀಯತೆ ತುಂಬುವ ಒಂದೆರಡು ಮಾತುಗಳ ಅವಶ್ಯಕತೆಯೂ ಇದೆ.

ಈಗ ಆಗಬೇಕಾದ ಕಾರ್ಯವೇ ಇದು. ದುರಂತಗಳನ್ನೇ ವರ್ಣಿಸಿ ಪದೇ ಪದೇ ಬಿಂಬಿಸಿ ಜನತೆಯ ಮನೋಬಲ ಕುಗ್ಗಿಸಿ, ಋಣಾತ್ಮಕ ಭಾವ ಹೆಚ್ಚಾಗುವುದನ್ನು ತಪ್ಪಿಸಬಹುದು. ನೀವ ದನ್ನು ದಯವಿಟ್ಟು ಮರೆಯದಿರಿ. ನಿಮ್ಮ ಕ್ಯಾಮೆರಾ ಗಳು ಕೇವಲ ಸಾವಿನ ಬಾಗಿಲಲ್ಲಿ ನಿಂತಿರುವವರ ಫೋಟೋ ಕ್ಲಿಕ್ಕಿಸಲಿಕ್ಕೆ ಅಥವಾ ತನ್ನವರಾರು ಹತ್ತಿರವಿಲ್ಲದೆ ಅನಾಥವಾಗಿ ಚಿತಾಗಾರದೆದುರು ಸರತಿ ಸಾಲಿನಲ್ಲಿ ಮಲಗಿರುವ ಮೃತದೇಹಗಳ ಫೋಟೋ ಕ್ಲಿಕ್ಕಿಸಲಿಕ್ಕೆ ಮಾತ್ರ ಸೀಮಿತವಾಗದಿರಲಿ.

ದಯಮಾಡಿ ಜನತೆಗೆ ಧೈರ್ಯ ತುಂಬುವ ಕಾರ್ಯ ನಿಮ್ಮಿಂದ ಹೆಚ್ಚು ಸಾಧ್ಯ. ಕೊರೊನಾ ಸೋಂಕಿಗೆ ತುತ್ತಾದವರೆಲ್ಲರೂ ಸತ್ತು ಹೋಗಿದ್ದಿದ್ದರೆ ದೇಶದ ಜನಸಂಖ್ಯೆ ಈ ಹೊತ್ತಿಗೆ ಶೇ.50 ರಷ್ಟು ಕಡಿಮೆಯಾಗಿರುತ್ತಿತ್ತು. ಗುಣಮುಖರಾದವರ ಸಂಖ್ಯೆಯೂ ಕಡಿಮೆ ಏನಿಲ್ಲ.

ನಾವು ಕೊರೊನಾ ವಾರಿಯರ್ಸ್ ಅದೆಷ್ಟೋ ಕಾಳಜಿ ವಹಿಸುತ್ತೇವೆ. ಸ್ವರಕ್ಷಣೆ ಮೀರಿ, ರೋಗಿಗಳ ಸೇವೆ ಮಾಡಿ ಧೈರ್ಯ ತುಂಬಿ ಉಪಚಾರ ಮಾಡುತ್ತೇವೆ. ನಾವು ಆಸ್ಪತ್ರೆ ಸಿಬ್ಬಂದಿಗಳಾರೂ ರೋಗಿಗಳ ಮನೋಬಲ ಕುಗ್ಗಿಸುವ ಕಾರ್ಯ ಖಂಡಿತಾ ಮಾಡಲ್ಲ.

ಎಲ್ಲಿಯೋ ಯಾವುದೋ ಒಂದು ಮೂಲೆಯಲ್ಲಿ ಅಪ್ಪಿ ತಪ್ಪಿ ಅಜಾಗರೂಕತೆ ಯಾದದ್ದೇ ಹೈಲೈಟ್ ಆಗಿ ಇಡೀ ಆಸ್ಪತ್ರೆ, ವೈದ್ಯಕೀಯ ತಂಡ, ಸಹವರ್ತಿಗಳ ಸಮುದಾಯವನ್ನೇ ದೋಷಿಗಳಾಗಿ ಬಿಂಬಿಸುವ ಕಾರ್ಯ ಮಾಡಿದರೆ ಜನರ, ರೋಗಿಗಳ, ಮನೋಬಲ ಕುಗ್ಗುವುದಲ್ಲವೇ ?

ಸೋಂಕಿತರಲ್ಲಿ ನಮ್ಮ - ನಿಮ್ಮ ಬಂಧುಗಳು, ವೃದ್ದರು, ಮಕ್ಕಳೂ ಎಲ್ಲರೂ ನಮ್ಮವರೇ ಇರುತ್ತಾರಲ್ಲವೇ !?

ಅವರಿಗೆ ಔಷಧೋಪಚಾರ, ಸಾಂತ್ವನ ಹಾಗೂ ಮಾಧ್ಯಮಗಳ ಧನಾತ್ಮಕ ಸಹಕಾರ ಅವಶ್ಯವಾಗಿದೆ. ಹಾಗೆಯೇ ನಾಗರಿಕ ಪ್ರಜ್ಞೆಯೂ ಅತೀ ಮುಖ್ಯ. ಸರ್ಕಾರದ ನಿಯಮ ಪಾಲನೆ, ಸ್ವರಕ್ಷಣೆಯ ಕಾಳಜಿ, ಸಾಮಾಜಿಕ, ಭೌತಿಕ ಅಂತರ, ಅನಾವಶ್ಯಕ ಓಡಾಟದ ನಿರ್ಬಂಧ ಮುಂತಾದವುಗಳನ್ನು ಪದೇ ಪದೇ ಬಿತ್ತರಿಸಿ, ಪ್ರತಿ ನಾಗರಿಕ ಜಾಗೃತ ನಾಗುವಂತೆ ಮಾಧ್ಯಮಗಳು ಮಾಡಿದರೆ ಬಹುಶಃ ಈ ಮಹಾಮಾರಿಯನ್ನು ಖಂಡಿತಾ ಹಿಮ್ಮೆಟ್ಟಿಸಲು ಸಾಧ್ಯವಿದೆ.

ರೋಗದ ಲಕ್ಷಣಗಳು ಕಂಡ ಕೂಡಲೇ ವೈದ್ಯರನ್ನು ಸಂಪರ್ಕಿಸಿ, ಸೂಕ್ತ ಮಾರ್ಗದರ್ಶನ ಪಡೆದು ಹೋಮ್ ಐಸೋಲೇಷನ್‌ನಲ್ಲಿದ್ದು, ಆರೋಗ್ಯ ಕಾಪಾಡಿಕೊಂಡವರೂ ಇದ್ದಾರೆ. ನೀವು ಅವರ ಕಡೆಯೂ ಸ್ವಲ್ಪ ಗಮನಕೊಟ್ಟು ಕಾರ್ಯ ನಿರ್ವಹಿಸಿ, ಅಂಥವುಗಳ ಮೇಲೂ ಬೆಳಕು ಚೆಲ್ಲಿ.

ಸರ್ಕಾರದ ನಿಯಮಗಳಂತೆ ಲಸಿಕೆಯ ಅಭಿಯಾನಕ್ಕೆ ಒತ್ತು ಕೊಡಬಹುದು.

ಹೀಗೆ ಈ ಸಮಾಜಕ್ಕೆ ಧೈರ್ಯ ತುಂಬಿ ಮಾನವೀಯತೆಯನ್ನು ಜೀವಂತವಾಗಿಡಲು ಪ್ರಯತ್ನಿಸಿದ್ದಲ್ಲಿ ಬಹುಬೇಗ ಕೊರೊನಾ ಮುಕ್ತ ಭಾರತವಾಗುವುದರಲ್ಲಿ ಸಂದೇಹ ವಿಲ್ಲ. ಪ್ರತೀ ಸಲ ಪ್ರತೀ ಸಂದರ್ಭದಲ್ಲಿ ಸರ್ಕಾರವನ್ನೇ ಅವಲಂಬಿಸಿದರೆ ಹೇಗೆ ? ನಮಗೆ ನಮ್ಮದೇ ಆದ ಸಾಮಾಜಿಕ ಜವಾಬ್ದಾರಿ ಬೇಡವೇ ? ನಾವೂ ವಾರಗಟ್ಟಲೇ ಕುಟುಂಬದ ಪುಟ್ಟ ಮಕ್ಕಳ ಮುಖ ನೋಡದೇ, ಕನಿಷ್ಟ ಹತ್ತು ಗಂಟೆ ಕಿಟ್ ಸಹ ತೆರೆಯದೇ ದೇಹ ಬಾಧೆಗಳನ್ನು ಮೀರಿ ಕಾರ್ಯ ನಿರ್ವಹಿಸುತ್ತಿದ್ದೇವೆ. ಇದರ ಬಗೆಗೂ ಮಾಧ್ಯಮದವರು ಗಮನ ಹರಿಸಬೇಕಲ್ಲವೇ? ಇಷ್ಟಿದ್ದೂ ನಮ್ಮವರಿಗೂ ಹೇಗೋ, ಏನೋ ಸೋಂಕು ತಗುಲಿದರೆ ಆಗ ನಮ್ಮಗಳ ಗತಿ ? ನಮ್ಮನ್ನು ನಂಬಿದವರ ಮನಃಸ್ಥಿತಿ !? ಇದೆಲ್ಲವುದರ ಬಗ್ಗೆ ಮಾಧ್ಯಮ ಬಂಧುಗಳು ಗಮನ ಹರಿಸಿ, ತಾವು ಪ್ರಯತ್ನ ಪಟ್ಟರೆ ಎಲ್ಲರಿಗೂ ಧೈರ್ಯ ನೀಡಬಲ್ಲಿರಿ...

ಇದೆಲ್ಲ ಓರ್ವ ಕೊರೊನಾ ವಾರಿಯರ್ ಆಗಿ ಕಳೆದ ವರುಷದಿಂದ ಪಡೆದ ಅನುಭವದಿಂದ ವಿವರಿಸುತ್ತಿದ್ದೇನೆ. ಇದು ಮಾಧ್ಯಮ, ಮೀಡಿಯಾ ಬಂಧುಗಳಿಗೆ ಕಳಕಳಿಯ ವಿನಂತಿ. ಈಗ ನಾವೆಲ್ಲಾ ಒಂದಾಗಿ ರಾಜಕೀಯ ಬೆರೆಸದೆ, ಪಕ್ಷ ಭೇದ ಮರೆತು, ಒಟ್ಟಿಗೆ ಸೇರಿ ಕೊರೊನಾ ಮುಕ್ತ ದೇಶ ಮಾಡುವತ್ತ, ಧನಾತ್ಮಕ ಮನಃಸ್ಥಿತಿ ಬೆಳೆಸುವತ್ತ ಪ್ರಯತ್ನ ಪಡೋಣ.



**- ಸುನಿತಾ ಪ್ರಕಾಶ್,**
ಶುಶ್ರೂಷಕಿ, ಆಶ್ರಯ
ಆಸ್ಪತ್ರೆ, ದಾವಣಗೆರೆ.

# ಲಾಕ್‌ಡೌನ್‌ಗಾಗಿ ಲಾಠಿ ಪ್ರಹಾರ ಬೇಡ ಪೊಲೀಸರಿಗೆ ಗೃಹ ಸಚಿವರ ಸೂಚನೆ

ಬೆಂಗಳೂರು, ಮೇ 11 - ಸರ್ಕಾರ ಜಾರಿಗೊಳಿಸಿರುವ ಸೆಮಿ ಲಾಕ್ ಡೌನ್ ಉಲ್ಲಂಘಿಸಿದವರ ಮೇಲೆ ಬಲ ಪ್ರಯೋಗ, ಲಾಠಿ ಚಾರ್ಜ್ ಮಾಡದಂತೆ ಪೊಲೀಸರಿಗೆ ಸೂಚನೆ ನೀಡಲಾಗಿದೆ ಎಂದು ಗೃಹ ಸಚಿವ ಬಸವರಾಜ ಬೊಮ್ಮಾಯಿ ತಿಳಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಬಲ ಪ್ರಯೋಗದ ಬದಲಾಗಿ ಕಾನೂನು ರೀತಿ ಕ್ರಮ ಜರುಗಿಸಲು ನಿರ್ದೇಶನ ನೀಡಲಾಗಿದೆ. ಕೋವಿಡ್ ಮಾರ್ಗಸೂಚಿ ಉಲ್ಲಂಘನೆ ಮಾಡಿ ಅನಾವಶ್ಯಕವಾಗಿ ಓಡಾಡುವ ವಾಹನಗಳನ್ನು ಸೀಜ್ ಮಾಡಲಾಗುತ್ತದೆ ಎಂದರು.

ರಾಜ್ಯದಲ್ಲಿ ಈಗಾಗಲೇ ಲಾಠಿ ಬೀಸುವುದು ನಿಂತು ಹೋಗಿದೆ. ಬೆಳಗ್ಗೆ 6 ರಿಂದ 10 ಗಂಟೆವರೆಗೆ ಅಗತ್ಯ ವಸ್ತುಗಳ ಖರೀದಿಗೆ ಅವಕಾಶವಿದೆ. ಸಂಚರಿಸುವ ವಾಹನಗಳ ಸಂಖ್ಯೆ ಕಡಿಮೆಯಾಗಿದೆ ಎಂದು ಹೇಳಿದರು.

ಕೇವಲ ಮಾರುಕಟ್ಟೆ ಪ್ರದೇಶಗಳಲ್ಲಿ ಜನ ಸಂದಣಿ ಸಮಸ್ಯೆ ಕಂಡು ಬರುತ್ತಿದೆ. ಅಂತಹ ಕಡೆಗಳಲ್ಲಿ ಜನ ಸಂದಣಿ ಹೆಚ್ಚಾಗದಂತೆ ಕ್ರಮ ಕೈಗೊಳ್ಳಲು ಸ್ಥಳೀಯ ಸಂಸ್ಥೆಗಳ ಮುಖ್ಯಸ್ಥರಿಗೆ ಸೂಚನೆ ನೀಡಲಾಗಿದೆ.

ಆದಷ್ಟು ಹೆಚ್ಚು ಜನರು ಒಟ್ಟಿಗೆ ಸೇರದಂತೆ ನಿಗಾ ವಹಿಸಬೇಕು. ಬೇರೆ ಬೇರೆ ರೀತಿಯ ಪರ್ಯಾಯ ವ್ಯವಸ್ಥೆ ಮಾಡಲು ನಿರ್ದೇಶನ ನೀಡಿರುವುದಾಗಿ ತಿಳಿಸಿದರು.

ಕೊರೊನಾ ನಿಯಂತ್ರಿಸಲು ಸರ್ಕಾರ ಕಠಿಣ ನಿಯಮಗಳನ್ನು ಜಾರಿಗೆ ತಂದಿದೆ. ಮಾರ್ಗಸೂಚಿ ಅನುಷ್ಠಾನಕ್ಕೆ ಪೊಲೀಸರು ಸಹಕಾರ ಕೊಡುತ್ತಾರೆ.

ಜನರು ವಾಸ್ತವ ಸ್ಥಿತಿ ಅರ್ಥ ಮಾಡಿಕೊಂಡು ಹದಿನಾಲ್ಕು ದಿನ ಸ್ವಯಂ ನಿರ್ಬಂಧ ಹಾಕಿಕೊಳ್ಳಬೇಕು. ಸೆಮಿ ಲಾಕ್ ಡೌನ್ ಯಶಸ್ಸಿಗೆ ಎಲ್ಲರೂ ಸಹಕಾರ ನೀಡಬೇಕೆಂದು ಗೃಹ ಸಚಿವರು ಮನವಿ ಮಾಡಿದರು.

# ಕೋವಿಡ್ ಲಸಿಕಾ ಕೇಂದ್ರಗಳ ಬಳಿ ವಾಗ್ವಾದ ನಿರಂತರ



ದಾವಣಗೆರೆ, ಮೇ 11- ಲಸಿಕೆ ಪಡೆಯಲು ಇಂದೂ ಸಹ ಜಿಲ್ಲಾಸ್ಪತ್ರೆ ಆವರಣದಲ್ಲಿನ ಲಸಿಕಾ ಕೇಂದ್ರದ ಮುಂದೆ ಜನಜಂಗುಳಿ ಇತ್ತು. ನೂರಾರು ಜನರು ಸರದಿ ಸಾಲಿನಲ್ಲಿ ನಿಂತಿದ್ದರು. ಮೊದಲು ರಿಜಿಸ್ಟರ್ ಮಾಡಿದವರು ಮತ್ತು ಇಂದು ಮೆಸೇಜ್ ಬಂದ ಸಾರ್ವಜನಿಕರ ಮಧ್ಯೆ ವಾಗ್ವಾದವೂ ನಡೆದ ಘಟನೆ ಜರುಗಿದೆ.

18 ವರ್ಷದಿಂದ 45 ವರ್ಷದೊಳಗಿನ ವಯಸ್ಸಿನವರಿಗೆ ಇಂದು ಜಿಲ್ಲಾಸ್ಪತ್ರೆಯ ಲಸಿಕಾ ಕೇಂದ್ರಲ್ಲಿ ಮೊದಲ ಕೋವಿಡ್ ಲಸಿಕೆ ನೀಡಲಾಗುತ್ತಿತ್ತು. ಯುವಕರು, ಮಧ್ಯ ವಯಸ್ಕರು, 45 ವರ್ಷದೊಳಗಿನವರು ಸೇರಿದಂತೆ ಅದಕ್ಕೂ ಮೇಲ್ಪಟ್ಟ ವಯಸ್ಸಿನ ನೂರಾರು ಜನರು ಬೆಳಗ್ಗೆಯಿಂದಲೇ ಸರದಿ ಸಾಲಿನಲ್ಲಿ ಲಸಿಕೆ ಪಡೆಯಲು ತಮ್ಮ ಸರದಿಯನ್ನೇ ಎದುರು ನೋಡುತ್ತಿದ್ದರು.

ಈ ಕೇಂದ್ರದಲ್ಲಿ ಇಂದು ಆನ್‌ಲೈನ್‌ನಲ್ಲಿ ನೋಂದಣಿ ಮಾಡಿಸಿಕೊಂಡವರಿಗೆ ಮಾತ್ರ ಲಸಿಕೆ ನೀಡಲಾಗುತ್ತಿತ್ತು. 150 ಜನರಿಗೆ ಮಾತ್ರ ಲಸಿಕೆ ನೀಡಲಾಯಿತು. ಈ ಹಿಂದೆಯೇ ಮೊದಲು ರಿಜಿಸ್ಟರ್ ಮಾಡಿದ ಜನರ ಸರದಿ ಸಾಲು ಒಂದು ಕಡೆಯಾದರೆ, ಇಂದು ನೀಡುವುದಾಗಿ ಮೆಸೇಜ್ ಬಂದಿದ್ದವರ ಮತ್ತೊಂದು ಸಾಲು ಕಂಡು ಬಂತು.

ನಮಗೆ ಇವತ್ತು ಮೆಸೇಜ್ ಬಂದಿದೆ. ಇವತ್ತೇ ಲಸಿಕೆ ನೀಡುವಂತೆ 18 ವರ್ಷದಿಂದ 45 ವರ್ಷದೊಳಗಿನ ವಯಸ್ಸಿನವರು ಪಟ್ಟು ಹಿಡಿದರು. ಅಲ್ಲದೇ ತಾವೂ ಸಹ ಮುಂಜಾನೆಯಿಂದಲೇ ಲಸಿಕೆ ಪಡೆಯಲು ಕಾದಿದ್ದು, ನಮಗೂ ಲಸಿಕೆ ನೀಡಬೇಕೆಂದು ಮೊದಲು ರಿಜಿಸ್ಟರ್ ಮಾಡಿದವರೂ ಸಹ ಹಟ ಹಿಡಿದಿದ್ದಾರೆ. ಆಗ ಈ ಇಬ್ಬರ ನಡುವೆ ವಾಗ್ವಾದ ಉಂಟಾಗಿದ್ದು, ಆಗ ಸ್ಥಳಕ್ಕಾಗಮಿಸಿದ ಪೊಲೀಸರ ಮಧ್ಯ ಪ್ರವೇಶಿಸಿ, ಇಬ್ಬರನ್ನೂ ಮನವೊಲಿಸಲು ಯತ್ನಿಸಿದರು. 45 ವರ್ಷ ಮೇಲ್ಪಟ್ಟವರಿಗೆ ಸದ್ಯಕ್ಕೆ ಲಸಿಕೆ ಇಲ್ಲ. ಇಂದು ಆನ್ ಲೈನ್‌ನಲ್ಲಿ ನೋಂದಣಿಯಾಗಿ ಮೆಸೇಜ್ ಬಂದಿರುವ 18 ವರ್ಷದಿಂದ 45 ವರ್ಷದೊಳಗಿನ 150 ಜನರಿಗೆ ಮಾತ್ರ ಲಸಿಕೆ ಹಾಕುವುದಾಗಿ ಆರೋಗ್ಯ ಇಲಾಖೆ ಅಧಿಕಾರಿಗಳು ಕೊನೆಗೆ ಸ್ಪಷ್ಟಪಡಿಸಿದ್ದಾರೆ. ಲಸಿಕಾ ಕೇಂದ್ರದ ಬಳಿ ಎಂದಿನಂತೆ ಇಂದೂ ಸಾಮಾಜಿಕ ಅಂತರವಿಲ್ಲದೆ ಸರದಿ ಸಾಲಿನಲ್ಲಿ ಜನರು ನಿಂತಿದ್ದ ದೃಶ್ಯ ಕಂಡು ಬಂತು.

# 2ನೇ ದಿನದ ಲಾಕ್‌ಡೌನ್‌ಗೆ ಸ್ವಯಂ ಪ್ರೇರಿತ ದಿಗ್ಬಂಧನ



## ಅವಕಾಶದ ಸಮಯದಲ್ಲಿ ಮಾರ್ಗಸೂಚಿ ಕೈ ಬಿಟ್ಟ ಜನರು

ದಾವಣಗೆರೆ, ಮೇ 11- ಪೊಲೀಸರ ಲಾಠಿ ರುಚಿ ಹಾಗೂ ಸರ್ಕಾರದ ಬಿಗಿಯಾದ ನಿಯಮದಿಂದ 2ನೇ ದಿನವಾದ ಇಂದು ನಗರದಲ್ಲಿ ಸಾರ್ವಜನಿಕರು ಸ್ವಯಂ ಪ್ರೇರಿತರಾಗಿ ದಿಗ್ಬಂಧನ ಹಾಕಿಕೊಂಡು ಮನೆಯಲ್ಲಿರುವ ಮುಖೇನ ಲಾಕ್‌ಡೌನ್‌ಗೆ ಸ್ಪಂದನೆ ವ್ಯಕ್ತವಾಗಿದೆ. ಮನೆಯಿಂದ ಆಚೆ ಬಂದು ಸುಖಾಸುಮ್ಮನೆ ವಾಹನಗಳಲ್ಲಿ ಓಡಾಡಿದರೆ ವಾಹನ ಜಪ್ತಿ ಮಾಡಬಹುದೆಂಬ ಭೀತಿ, ಅಲ್ಲದೇ ತಮಗೆ ಬೀಳಬಹುದಾದ ಲಾಠಿ ರುಚಿ, ದಂಡ ಇತ್ಯಾದಿ ಕಾರಣಗಳಿಂದ ಸಾರ್ವಜನಿಕರು ನಗರದ ಬಹುತೇಕ ಕಡೆ ಮನೆಯಿಂದ ಹೊರ ಬಾರದೆ ತಮಗೆ ತಾವೇ ಸ್ವಯಂ ನಿರ್ಬಂಧ ಹಾಕಿಕೊಂಡಿದ್ದು ವಿಶೇಷವಾಗಿತ್ತು.

ಬೆಳಗ್ಗೆ ನಿಗದಿಯಾಗಿದ್ದ 10 ಗಂಟೆವರೆಗಿನ ಅವಕಾಶದ ಸಮಯದಲ್ಲಿ ಮಾತ್ರ ಅಗತ್ಯ ವಸ್ತು ಖರೀದಿಗೆ ಜನರು ಮುಗಿ ಬೀಳುತ್ತಿದ್ದ ದೃಶ್ಯ ಸಾಮಾನ್ಯವಾಗಿತ್ತು. ಈ ನಡವಳಿಕೆ ಪೊಲೀಸರಿಗೆ ಕಿರಿಕಿರಿ ಉಂಟು ಮಾಡಿತ್ತು.

ನಗರದ ಕೆ.ಆರ್. ಮಾರುಕಟ್ಟೆಯಲ್ಲಿ ಜನಸಂದಣಿ ಹೆಚ್ಚಾಗಿತ್ತಲ್ಲದೇ ತರಕಾರಿ ಖರೀದಿಗೆ ಮುಗಿಬಿದ್ದಿದ್ದ ದೃಶ್ಯ ಸಾಮಾನ್ಯವಾಗಿತ್ತು. ಗಡಿಯಾರ ಕಂಬ, ಕಾಳಿಕಾದೇವಿ ರಸ್ತೆ, ಚೌಕಿಪೇಟೆ, ಚಾಮರಾಜೇಂದ್ರ ವೃತ್ತದಲ್ಲೂ ವ್ಯಾಪಾರ-ವಹಿವಾಟಿಗೆ ಜನ ಸೇರಿದ್ದರು. ಪೊಲೀಸ್, ತಾಲ್ಲೂಕು ಆಡಳಿತ, ನಗರ ಪಾಲಿಕೆಯಿಂದ ಎಷ್ಟೇ ಮನವಿ, ಎಚ್ಚರಿಕೆ ನೀಡಿದರೂ ಜನರ ಭಂಡತನ ಪ್ರದರ್ಶನ ಮುಂದುವರೆದಿತ್ತು. ಅದರಲ್ಲೂ ಸಾಮಾಜಿಕ ಅಂತರವನ್ನೇ ಕಾಪಾಡಿಕೊಳ್ಳದೇ, ಮಾರ್ಗಸೂಚಿಗಳನ್ನು ಗಾಳಿಗೆ ತೂರಿದ್ದರು.

10 ಗಂಟೆ ಸಮಯ ಮೀರುತ್ತಿದ್ದಂತೆ ಅದೇ ವಾಣಿಜ್ಯ ರಸ್ತೆಗಳಾದ ಕೆ.ಆರ್. ಮಾರುಕಟ್ಟೆ, ಎಪಿಎಂಸಿ, ಹಳೇ ದಾವಣಗೆರೆಯ ಕೆಲವು ರಸ್ತೆಗಳು ಬಿಕೋ ಎನ್ನುತ್ತಿದ್ದವು. ವಾಹನ ಮತ್ತು ಜನರ ಸಂಚಾರ ವಿರಳವಾಗಿತ್ತು.

ಸೋಮವಾರ ನಗರದ ಎಲ್ಲಾ ಪ್ರಮುಖ ವೃತ್ತಗಳಲ್ಲಿ ಕಂದಾಯ ಇಲಾಖೆ, ಪಾಲಿಕೆ ಮತ್ತು ಪೊಲೀಸ್ ಇಲಾಖೆಗಳು ಜಂಟಿಯಾಗಿ ಕಾರ್ಯಾಚರಣೆ ನಡೆಸಿ, ಅನಗತ್ಯವಾಗಿ ಓಡಾಟ ನಡೆಸುತ್ತಿದ್ದವರಿಗೆ ಎಚ್ಚರಿಕೆ ನೀಡಿ ಕಳುಹಿಸಿದ್ದರು.

ಇಂದು ಎಲ್ಲಾ ವೃತ್ತಗಳಲ್ಲಿ ಮಾಮೂಲಿನಂತೆ ಬ್ಯಾರಿಕೇಡ್‌ಗಳನ್ನು ಹಾಕಲಾಗಿತ್ತು. ದ್ವಿಪಥ ರಸ್ತೆಗಳನ್ನು ಬಂದ್ ಮಾಡಿ ಕೇವಲ ಏಕಮುಖವಾಗಿ ಸಂಚರಿಸುವಂತೆ ವಾಹನ ಸವಾರರಿಗೆ ಸೂಚಿಸಲಾಗುತ್ತಿತ್ತು. ನಗರದ ಕೆಎಸ್‌ಆರ್‌ಟಿಸಿ ಬಸ್‌ನಿಲ್ದಾಣ, ಖಾಸಗಿ ಬಸ್‌ನಿಲ್ದಾಣ, ಮಾರುಕಟ್ಟೆ ಪ್ರದೇಶಗಳು, ಆಟೋ ನಿಲ್ದಾಣಗಳು ಸೇರಿದಂತೆ ಜನನಿಬಿಡ ಪ್ರದೇಶಗಳಲ್ಲಿ ಅಘೋಷಿತ ಬಂದ್ ವಾತಾವರಣ ನಿರ್ಮಾಣವಾಗಿತ್ತು. ದಾವಣಗೆರೆ ನಗರವನ್ನು ಪ್ರವೇಶಿಸುವ ಪ್ರಮುಖ ರಸ್ತೆಗಳಲ್ಲಿ ನಾಕಾಬಂದಿ ಹಾಕಲಾಗಿತ್ತು.

**163 ವಾಹನಗಳ ವಶ-501 ಮಾಸ್ಕ್ ಧರಿಸದ ಪ್ರಕರಣ:** ಯುವ ಜನರು, ಮಧ್ಯ ವಯಸ್ಕರು. ಅಂತಹವರ ವಾಹನಗಳನ್ನು ಜಪ್ತು ಮಾಡಿದ ಪೊಲೀಸರು ಎಂದಿನಂತೆ ವಾಹನಗಳನ್ನು ಪೊಲೀಸ್ ಕವಾಯತ್ತು ಮೈದಾನಕ್ಕೆ ರವಾನಿಸಿದರು. ಕುಂಟು ನೆಪ ಹೇಳಿಕೊಂಡು ರಸ್ತೆಗಿಳಿದ 163 ವಾಹನಗಳನ್ನು ಪೊಲೀಸರು ಮುಲಾಜಿಲ್ಲದೇ ಜಪ್ತು ಮಾಡಿ, ಅವುಗಳ ಮಾಲೀಕರ ವಿರುದ್ಧ ಸೂಕ್ತ ಕ್ರಮ ಕೈಗೊಂಡಿದ್ದಾರೆ. ಅಲ್ಲದೇ ಮಾಸ್ಕ್ ಧರಿಸದ 501 ಮಂದಿಯಿಂದ 77,250 ರೂ. ದಂಡ ವಸೂಲಿ ಮಾಡಿದ್ದಾರೆ.

# ಆಸ್ಪತ್ರೆಗಳಲ್ಲಿ ಖಾಲಿ ಇರುವ ಹುದ್ದೆಗಳನ್ನು ಮೊದಲು ಭರ್ತಿ ಮಾಡಿ : ಎಂ.ಟಿ.ಸುಭಾಷ್ಚಂದ್ರ



ಹರಪನಹಳ್ಳಿ, ಮೇ 11 - ಇತ್ತೀಚೆಗೆ ಜಿಲ್ಲಾ ಉಸ್ತುವಾರಿ ಸಚಿವ ಆನಂದ್ ಸಿಂಗ್ ತಾಲ್ಲೂಕು ಮಟ್ಟದ ಅಧಿಕಾರಿಗಳ ಸಭೆ ನಡೆಸಿ ಪ್ರತಿ ತಾಲ್ಲೂಕಿನ ಸರ್ಕಾರಿ ಆಸ್ಪತ್ರೆಗಳನ್ನು ಜಂಬೋ ಆಮ್ಲಜನಕ ಸಿಲಿಂಡರ್ಸ್ 100 ಬೆಡ್ ಆಸ್ಪತ್ರೆಗಳನ್ನಾಗಿ ಮಾಡುವುದಾಗಿ ಘೋಷಣೆ ಮಾಡಿರುವುದನ್ನು ಕಾಂಗ್ರೆಸ್ ಮುಖಂಡ ಎಂ.ಟಿ. ಸುಭಾಷ್ಚಂದ್ರ ಸ್ವಾಗತಿಸಿದ್ದಾರೆ.

ವಿಜಯ ನಗರ, ಬಳ್ಳಾರಿ ಜಿಲ್ಲಾ ವ್ಯಾಪ್ತಿಯ ಎಲ್ಲ ತಾಲ್ಲೂಕು, ಅದರಲ್ಲೂ ಹರಪನಹಳ್ಳಿಯಲ್ಲಿ ಸಾಕಷ್ಟು ವೈದ್ಯರು, ಸಿಬ್ಬಂದಿಗಳ ಕೊರತೆಯಿದೆ. ಮೊದಲು ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಿ ನಂತರ ಆಮ್ಲಜನಕವುಳ್ಳ ಆಸ್ಪತ್ರೆಗಳನ್ನು ಮಾಡಲು ಮುಂದಾಗಬೇಕು. ಹರಪನಹಳ್ಳಿ ತಾಲ್ಲೂಕಿನ ಅರಸೀಕೆರೆ, ತೆಲಗಿ, ಹಲುವಾಗಲು ಮತ್ತು ಚಿಗಟೇರಿ ವ್ಯಾಪ್ತಿಯ ಸಮುದಾಯ ಆರೋಗ್ಯ ಕೇಂದ್ರ ಮತ್ತು ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಅಗತ್ಯ ಸಿಬ್ಬಂದಿ ನೇಮಿಸಿ ಅವುಗಳಿಗೆ ಮೂಲ ಸೌಕರ್ಯ ಕಲ್ಪಿಸಬೇಕು ಎಂದು ಅವರು ಒತ್ತಾಯಿಸಿದ್ದಾರೆ.

ತಾಲ್ಲೂಕಿನ 40 ಕ್ಕೂ ಹೆಚ್ಚಿನ ಗ್ರಾಮಗಳಲ್ಲಿ ಕುಡಿಯುವ ನೀರಿನ ಕೊರತೆಯಿದೆ. ಈ ಬಗ್ಗೆ ಅಧಿಕಾರಿ ವರ್ಗ ಮತ್ತು ಶಾಸಕರು ಬಳ್ಳಾರಿ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗೆ ಸಲ್ಲಿಸಿದ್ದ ಪ್ರಸ್ತಾವನೆಗೆ ಏಕೆ ಒಪ್ಪಿಗೆ ಸಿಗಲಿಲ್ಲ, ಇದರಿಂದ ಹಿಂದೆ ಪ್ರಭಾವಿ ಮಂತ್ರಿಯಾಗಿದ್ದ, ಹಿರಿಯ ಶಾಸಕ ಜಿ. ಕರುಣಾಕರ ರೆಡ್ಡಿ ಅವರ ಆಡಳಿತ ನಿಯಂತ್ರಣ ಕೈ ತಪ್ಪಿದೆ, ಅವರ ಮಾತನ್ನು ಅಧಿಕಾರಿಗಳು ಕೇಳುತ್ತಿಲ್ಲ ಎಂಬುದು ಇದರಿಂದ ಗೋಚರಿಸುತ್ತದೆ. ಶಾಸಕರು ಎಲ್ಲಿಯೋ ಇದ್ದು ಮೊಬೈಲ್ ಮೂಲಕ ಕೆಲಸ ಮಾಡದೇ ಕ್ಷೇತ್ರದಲ್ಲಿ ವಾಸ್ತವ್ಯ ಹೂಡಿ ಕ್ಷೇತ್ರದ ಜನತೆಯ ನೋವುಗಳಿಗೆ ಸ್ಪಂದಿಸಬೇಕು.

ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿ ಅನುಷ್ಠಾನಕ್ಕೆ ತಂದಿರುವ ಗರ್ಭಗುಡಿ ಬ್ರಿಡ್ಜ್ ಕಂ ಬ್ಯಾರೇಜ್ ಕೆರೆಗಳಿಗೆ ನೀರು ತುಂಬಿಸುವ ಯೋಜನೆ ಹಾಗೂ ತಮ್ಮ ಅವಧಿಯ ಲ್ಲಿಯೇ ಮಂಜೂರಾಗಿದ್ದ ರಾಜೀವ್ ಗಾಂಧಿ ಸಬ್ ಮಿಷನ್ ಯೋಜನೆಯಡಿ ಬಹುಗ್ರಾಮಗಳಿಗೆ ಕುಡಿಯುವ ನೀರಿನ ಯೋಜನೆಗಳನ್ನು ಶೀಘ್ರ ಪೂರ್ಣಗೊಳಿಸಿ ತಾಲ್ಲೂಕಿಗೆ ನೀರುಣಿಸಬೇಕು.

ಕೊರೊನಾ ಸಂಕಷ್ಟಕ್ಕೆ ಸಿಲುಕಿರುವ ಕುಟುಂಬಗಳ ನೆರವಿಗೆ ಆಡಳಿತ ನಡೆಸುತ್ತಿರುವ ಸರ್ಕಾರ ಧಾವಿಸಬೇಕು ಎಂದು ಅವರು ಒತ್ತಾಯಿಸಿದ್ದಾರೆ.

# ಬೆಂಗಳೂರಿಗೆ ಬಂತು ಆಕ್ಸಿಜನ್ ಎಕ್ಸ್‌ಪ್ರೆಸ್

ಬೆಂಗಳೂರು, ಮೇ 11 – ಮೊದಲ ಆಕ್ಸಿಜನ್ ಎಕ್ಸ್‌ಪ್ರೆಸ್ 120 ಟನ್ ದ್ರವ ಆಕ್ಸಿಜನ್‌ನೊಂದಿಗೆ ಬೆಂಗಳೂರಿಗೆ ತಲುಪಿದೆ.

ಆರು ಕ್ರಯೋಜನಿಕ್ ಕಂಟೈನರ್‌ಗಳಲ್ಲಿ 120 ಟನ್ ಆಕ್ಸಿಜನ್ ಹೊಂದಿದ್ದ ರೈಲು, ಜಾರ್ಖಂಡ್‌ನಿಂದ ಸೋಮವಾರ ಹೊರಟು ಬೆಂಗಳೂರಿನ ವೈಟ್‌ಫೀಲ್ಡ್‌ನಲ್ಲಿರುವ ಡಿಪೋಗೆ ತಲುಪಿದೆ. ಆಕ್ಸಿಜನ್ ಎಕ್ಸ್‌ಪ್ರೆಸ್ ಸಾಗಣೆಗಾಗಿ ರೈಲ್ವೆ ವತಿಯಿಂದ ಗ್ರೀನ್ ಕಾರಿಡಾರ್ ರೂಪಿಸಲಾಗಿತ್ತು ಎಂದು ರೈಲ್ವೆ ಅಧಿಕಾರಿಗಳು ಹೇಳಿದ್ದಾರೆ.

# ಮಲೇಬೆನ್ನೂರಿನಲ್ಲಿ ಮಹಿಳೆ ಸಾವು

ಮಲೇಬೆನ್ನೂರು, ಮೇ 11- ಪಟ್ಟಣದ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಮಂಗಳವಾರ ಮಹಿಳೆಯೊಬ್ಬರು ಕೊರೊನಾ ಸೋಂಕಿನಿಂದ ಮೃತಪಟ್ಟಿದ್ದಾರೆ.

ಇಲ್ಲಿನ ಕಲ್ಲೇಶ್ವರ ದೇವಸ್ಥಾನದ ಸಮೀಪದ ನಿವಾಸಿಯಾದ ಮೃತ ಮಹಿಳೆಗೆ 60 ವರ್ಷ ವಯಸ್ಸಾಗಿತ್ತು. ಕಳೆದ 1 ವಾರದಿಂದ ಅನಾರೋಗ್ಯದಿಂದ ಇದ್ದ ಮೃತ ಮಹಿಳೆಗೆ ಉಸಿರಾಟದಲ್ಲಿ ಏರುಪೇರಾದ ಕಾರಣ ಆರೋಗ್ಯ ಕೇಂದ್ರಕ್ಕೆ ಕರೆ ತಂದಿದ್ದಾರೆ. ಆರೋಗ್ಯ ಪರೀಕ್ಷೆ ಮಾಡುತ್ತಿದ್ದ ವೇಳೆಯಲ್ಲೇ ಸಾವನ್ನಪಿದ್ದಾರೆಂದು ಹೇಳಲಾಗಿದೆ. ನಿಟ್ಟೂರಿನಲ್ಲೂ ಭಾನುವಾರ ಸಂಜೆ 60 ವರ್ಷದ ವ್ಯಕ್ತಿಯೊಬ್ಬರು ಕೊರೊನಾ ಸೋಂಕಿನಿಂದ ಮೃತ ಪಟ್ಟಿದ್ದಾರೆ.

**40ಕ್ಕೂ ಹೆಚ್ಚು ಪಾಸಿಟಿವ್ :** ಮಂಗಳವಾರ ಹರಿಹರ ತಾಲ್ಲೂಕಿನಲ್ಲಿ 40ಕ್ಕೂ ಹೆಚ್ಚು ಜನರ ಕೋವಿಡ್ ಟೆಸ್ಟ್ ಪಾಸಿಟಿವ್ ಬಂದಿದೆ ಎಂದು ತಿಳಿದುಬಂದಿದೆ. ಸೋಮವಾರ 28 ಜನರಿಗೆ ಸೋಂಕು ದೃಢಪಟ್ಟಿತ್ತು.

# ಕಾಯಿಪೇಟೆಯಲ್ಲಿ ನಾಡಿದ್ದು ಸರಳ ಬಸವ ಜಯಂತಿ

ದಾವಣಗೆರೆ,ಮೇ 11- ನಗರದ ಕಾಯಿಪೇಟೆಯ ಶ್ರೀ ಬಸವೇಶ್ವರ ದೇವಸ್ಥಾನದಲ್ಲಿ ನಾಡಿದ್ದು ದಿನಾಂಕ 14ರ ಶುಕ್ರವಾರ ಸರಳವಾಗಿ ಬಸವ ಜಯಂತಿಯನ್ನು ಆಚರಿಸಲಾಗುತ್ತದೆ ಎಂದು ಶ್ರೀ ಬಸವೇಶ್ವರ ದೇವಸ್ಥಾನದ ಸೇವಾ ಸಂಘ ತಿಳಿಸಿದೆ.

ಕೊರೊನಾ ವೈರಸ್ ಹಿನ್ನೆಲೆಯಲ್ಲಿ ಸರ್ಕಾರ ರೂಪಿಸಿರುವ ಮಾರ್ಗಸೂಚಿಯನ್ವಯ ಬಸವ ಜಯಂತಿಯನ್ನು ಸರಳವಾಗಿ ನಡೆಸಲು ತೀರ್ಮಾನಿಸಲಾಗಿದೆ ಎಂದು ಸಂಘದ ಪದಾಧಿಕಾರಿಗಳು ವಿವರಿಸಿದ್ದಾರೆ.

**ರಂಜಾನ್ ರೋಜಾ ಸಮಯ**

ದಿನಾಂಕ 12.05.2021
ಇಫ್ತೇಯಾರಿ ಸಮಯ : 6-51
ದಿನಾಂಕ 13.05.2021
ಸಹೇರಿ ಸಮಯ : 4-42

# ಅನ್ನ ದಾಸೋಹಕ್ಕೆ ದಾನಿಗಳ ಸಹಾಯ ಹಸ್ತ




**ತರಳಬಾಳು ಸೇವಾ ಸಮಿತಿ ಮತ್ತು ಶಿವಸೈನ್ಯ ಯುವಕರ ಸಂಘದ ವಿಶಿಷ್ಟ ಸೇವೆಗೆ ಮೇಯರ್ ಎಸ್.ಟಿ. ವೀರೇಶ್ ಪ್ರಶಂಸೆ**

ದಾವಣಗೆರೆ,ಮೇ 11- ಲಾಕ್ ಡೌನ್ ಸಂದರ್ಭದಲ್ಲಿ ಸಂಕಷ್ಟ ಪರಿಸ್ಥಿತಿಯಲ್ಲಿರುವ ಸೋಂಕಿತರು ಮತ್ತು ಬಡವರಿಗೆ ಉಚಿತವಾಗಿ ಅನ್ನ ದಾಸೋಹ ಮಾಡುತ್ತಿರುವ ನಗರದ ತರಳಬಾಳು ಸೇವಾ ಸಮಿತಿ ಮತ್ತು ಶಿವಸೈನ್ಯ ಯುವಕರ ಸಂಘಕ್ಕೆ ಅನೇಕರು ದಾನ ಮಾಡುವುದರ ಮೂಲಕ ಸಹಾಯ ಹಸ್ತ ಚಾಚಿದ್ದಾರೆ.


ಗಿರೀಶ್ ಕಕ್ಕರಗೊಳ್ಳ, ಶಿವಗಂಗಾ ಶ್ರೀನಿವಾಸ್, ಮಾಗನೂರು ಸಂಗಮೇಶ್ವರ ಗೌಡ್ರು, ಮಾಗನೂರು ಪ್ರಭು, ಶಾಮನೂರಿನ ಗುಂಟನೂರು ಜಯದೇವಪ್ಪ, ಪ್ರಮೋದ್, ಡಾ. ಹರೀಶ್, ಬಿಸಲೇರಿ ಜಗದೀಶ್, ಶ್ರೀನಿವಾಸ್ ದಾಸಕರಿಯಪ್ಪ, ಕೆ.ಎಂ. ಪವನ್ ಕುಮಾರ್, ಆವರಗೆರೆ ಅರುಣ್, ವಿನಾಯಕ ಮೆಡಿಕಲ್ಸ್, ಡಾ. ಎಸ್.ರಾಜು, ಎಬಿಎಂ ರಾಜು, ಚಾಮುಂಡಿ ಕುಮಾರ್ ಸೇರಿದಂತೆ ಅನೇಕರು ದಾಸೋಹಕ್ಕೆ ಧನ ಸಹಾಯ ಮಾಡಿದ್ದಾರೆ.

ಕಳೆದ 1 ವಾರದಿಂದ ಪ್ರತಿದಿನವೂ ಸಿ.ಜಿ. ಆಸ್ಪತ್ರೆ, ಹಳೇ ಆಸ್ಪತ್ರೆಯಲ್ಲಿ ನಡೆಯುತ್ತಿರುವ ಈ ದಾಸೋಹ ವನ್ನು ಲಾಕ್ ಡೌನ್ ಮುಗಿಯುವವರೆಗೂ ಮುಂದುವರೆಸಲಾಗುವುದು ಎಂದು ತಿಳಿಸಿರುವ ಸಂಘದ ಗೌರವಾಧ್ಯಕ್ಷ ಶಶಿಧರ್ ಹೆಮ್ಮನಬೇತೂರು, ಸಹಾಯ ಮಾಡಲಿಚ್ಛಿಸುವವರು ದಾಸೋಹದ ಸಿದ್ಧತೆ ಮಾಡಿಕೊಳ್ಳುತ್ತಿರುವ ಶ್ರೀಮತಿ ಪಾರ್ವತಮ್ಮ ಶಾಮನೂರು ಶಿವಶಂಕರಪ್ಪ ಕಲ್ಯಾಣ ಮಂಟಪವನ್ನು ಸಂಪರ್ಕಿಸಬಹುದು ಎಂದು ಹೇಳಿದ್ದಾರೆ.

**ಶ್ಲಾಘನೆ :** ಈ ಪುಣ್ಯದ ಕಾರ್ಯಕ್ಕೆ ಸಹಾಯ ಮಾಡುತ್ತಿರುವ ಶಿವಗಂಗಾ ಶ್ರೀನಿವಾಸ್ ಸೇರಿದಂತೆ, ಅನೇಕ ದಾನಿಗಳನ್ನು ಎಸ್.ಎಸ್. ಕಲ್ಯಾಣ ಮಂಟಪದಲ್ಲಿ ನಿನ್ನೆ ನಡೆದ ಸರಳ ಸಮಾರಂಭದಲ್ಲಿ ಮಹಾನಗರ ಪಾಲಿಕೆ ಮಹಾಪೌರರಾದ ಎಸ್.ಟಿ. ವೀರೇಶ್ ಅವರು ಸನ್ಮಾನಿಸಿ, ಗೌರವಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ವೀರೇಶ್, ವಿಶ್ವಾದ್ಯಂತ ತಲ್ಲಣಗೊಳಿಸಿರುವ ಕೊರೊನಾ ವೈರಸ್ ಸಂದರ್ಭದಲ್ಲಿ ಸಂದಿಗ್ಧ ಪರಿಸ್ಥಿತಿಯಲ್ಲಿರುವ ಜನರಿಗೆ ಅನ್ನ ದಾಸೋಹದಂತೆ ವಿಶಿಷ್ಟ ಸೇವೆ ಸಲ್ಲಿಸುತ್ತಿರುವ ತರಳಬಾಳು ಸೇವಾ ಸಮಿತಿ ಮತ್ತು ಶಿವಸೈನ್ಯ ಯುವಕರ ಸಂಘದ ಪದಾಧಿಕಾರಿಗಳನ್ನು ಅಭಿನಂದಿಸಿದರು.

ಮಾಗನೂರು ಉಮೇಶ್ ಗೌಡ್ರು, ಲಿಂಗರಾಜ್ ಅಗಸನಕಟ್ಟೆ, ಶ್ರೀನಿವಾಸ್ ಮೆಳ್ಳೇಕಟ್ಟೆ, ಪ್ರಭು ಕಾವಲಹಳ್ಳಿ, ಶಿವಕುಮಾರ್ ಕೊರಟಿಕೆರೆ, ಹಾಲೇಶ್ ಕಂಸಾಗರ, ಹರೀಶ್ ಬೆಳ್ಳಿಗನೂರು, ಚಾಮುಂಡಿ ಉಮೇಶ್, ಬಸರಾಜ್ ಸೋಮನಹಳ್ಳಿ, ಕಕ್ಕರಗೊಳ್ಳ ಪರಮೇಶ್ವರಪ್ಪ ಮತ್ತಿತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

Girmilk
Healthy cow = Healthy Milk
100% Pure Bred Desi Gir Cows, Fed With **Ayurvedic Herbs** And **Special Minerals.** A Holistic And Wholesome Diet For The Cows.
A2 Protein GIR Cow milk PURE
Shatawari Tulsi Turmeric Ginger Garlic Jaggery

Available in
500 Ml, 1L Packs
Pure Ghee Made of Desi A2 Gir Milk is also available.
Buttermilk and Butter from gir Milk is also available.
Kasal Inc, +91 99021 85212, +91 70194 81919
Dairy at Mandalur, Davanagere.

# ಹೇಮಂತ್ ಎಸ್.ಜಿ. ನಿಧನ



ದಾವಣಗೆರೆ ಎಂ.ಸಿ.ಸಿ. 'ಬಿ' ಬ್ಲಾಕ್ ವಾಸಿ,
ಸಹಾಯಕ ಕಾರ್ಯಪಾಲಕ ಇಂಜಿನಿಯರ್ ದಿ|| ಆರ್. ಗಣೇಶ್ ಇವರ ಪುತ್ರ
**ಹೇಮಂತ್ ಎಸ್.ಜಿ.** ಅವರು
ದಿನಾಂಕ 09.05.2021ರ ಭಾನುವಾರ ಬೆಳಗಿನ ಜಾವ 1 ಗಂಟೆಗೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 25 ವರ್ಷ ವಯಸ್ಸಾಗಿತ್ತು.
ತಾಯಿ, ಸಹೋದರ, ಸಹೋದರಿ ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 09.05.2021ರ ಭಾನುವಾರ ಸಂಜೆ 5.30 ಕ್ಕೆ ಬೆಂಗಳೂರಿನ ಹಿಂದೂ ರುದ್ರಭೂಮಿಯಲ್ಲಿ ನೆರವೇರಿಸಲಾಯಿತು.

**ದುಃಖತಪ್ತ ಕುಟುಂಬ ವರ್ಗ**
ತಾಯಿ : ಶ್ರೀಮತಿ ನಾಗಮಣಿ ಗಣೇಶ್
ಸಹೋದರ : ಪುನೀತ್ ಶಂಕರ್, ಸಹೋದರಿ : ಪೂಜಾ ಎಸ್.ಜಿ.
ಬಂಧುಗಳು ಹಾಗೂ ಸ್ನೇಹಿತರು, ಮೊ. : 97311 10799

JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte